

GOVERNMENT OF TAMIL NADU

ಮೂರನೇ ತರಗತಿ

STANDARD THREE

ಅವಧಿ – I

TERM - I

ಕನ್ನಡ ಕಸ್ತೂರಿ

KANNADA READER

Department of School Education

Untouchability is inhuman and a crime

Government of Tamil Nadu

First Edition - 2026

(Published under New Syllabus in Trimester Pattern)

Price: Rs.

A call can change your life (24×7 toll free helplines for children below 18 years)

If you are forced into Child Marriage or Child Labour, If you are Emotionally, Physically, Sexually Harassed or Abused,

If you feel unsafe dial CHILDLINE 1098 Night & Day

Caller details will be kept confidential

If you are feeling Threatened or being Abused or Harassed - Emotionally, Physically or Sexually, If you are feeling unsafe, If you need guidance for Examinations or Higher Education

Dial 14417

Caller details will be kept confidential

Content Creation

State Council of Educational Research and Training

© SCERT 2026

Printing & Publishing

Tamil Nadu Textbook and Educational Services Corporation

Foreword

The early years of childhood are a time of wonder-when curiosity is boundless, imagination is vivid, and every experience becomes a step in the journey of learning. These textbooks for Classes 1 to 3 have been developed to honour this spirit, creating a learning experience that is joyful, meaningful, and engaging.

Developed as part of the **Tamil Nadu State Education Policy-2025**, these books mark a significant step towards strengthening foundational education in the State. The vision and direction provided by the **Hon'ble Minister for School Education** have ensured that the policy's emphasis on child-centred, competency-based, and inclusive learning is meaningfully reflected in these materials.

The leadership of the **Additional Chief Secretary,** School Education has been instrumental in ensuring the integration of 21st-century skills and knowledge, and in shaping the textbooks into engaging story-driven learning experiences.

This is further reflected in a competency-based approach to curriculum and assessment that moves beyond rote learning to foster deep conceptual understanding and meaningful application. The integration of value education to build character, along with life skills, art and motor skill development, enables the holistic development of the child.

The members of the High-Level Curriculum Expert Committee, the Chairperson and the members of the Curriculum Development Committee, have provided constant guidance, shaping and refining these materials through their insights and expertise, alongside the contributions of educators and practitioners acknowledged elsewhere in this book.

At this foundational stage, learning must build strong foundations while supporting the overall development of the child. These textbooks bring together a carefully designed set of features that make learning active, engaging, and meaningful:


- Opportunities for speaking and listening, building confidence in expression
- Activities that strengthen logical thinking and conceptual understanding
- Integrated spaces for reading and writing practice within lessons
- Fine and gross motor skill development through drawing, colouring, tracing, and movement-based tasks
- Simple avenues for independent learning and self-reflection

The books also integrate values and life skills, helping children develop empathy, cooperation, responsibility and confidence.

Learning is guided by a competency-based approach that moves beyond memorisation towards understanding and application. Assessment is embedded within the learning process, making it continuous, meaningful and supportive.

These textbooks are learning companions that invite children to explore, think and express. They represent a shared commitment to enabling every child to learn with joy, grow with confidence, and build a strong foundation for the future-advancing a vision of **"Education reimagined, inclusive, equitable, and future-ready".**

DIRECTOR
State Council of Educational
Research and Training (SCERT)
Tamil Nadu



THE CONSTITUTION OF INDIA

PREAMBLE

WE, THE PEOPLE OF INDIA, having solemnly resolved to constitute India into a **SOVEREIGN SOCIALIST SECULAR DEMOCRATIC REPUBLIC** and to secure to all its citizens:

JUSTICE, social, economic and political;

LIBERTY of thought, expression, belief, faith and worship;

EQUALITY of status and of opportunity;

and to promote among them all

FRATERNITY assuring the dignity of the individual and the unity and integrity of the Nation;

IN OUR CONSTITUENT ASSEMBLY this twenty-sixth day of November, 1949, do **HEREBY ADOPT, ENACT AND GIVE TO OURSELVES THIS CONSTITUTION.**


ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ ॥
ಪಂಜಾಬ ಸಿಂಧು ಗುಜರಾತ ಮರಾಠಾ ।
ದ್ರಾವಿಡ ಉತ್ಕಲ ವಂಗಾ ।
ವಿಂಧ್ಯ ಹಿಮಾಚಲ ಯಮುನಾ ಗಂಗಾ ॥
ಉಚ್ಛಲ ಜಲಧಿ ತರಂಗಾ ॥
ತವ ಶುಭ ನಾಮೇ ಜಾಗೇ ।
ತವ ಶುಭ ಆಶಿಷ ಮಾಗೇ ॥
ಗಾಹೇ ತವ ಜಯಗಾಥಾ ।
ಜನಗಣ ಮಂಗಳದಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ ॥
ಜಯ ಹೇ ಜಯ ಹೇ ಜಯ ಹೇ ।
ಜಯ ಜಯ ಜಯ ಜಯ ಹೇ ॥

– ರವೀಂದ್ರನಾಥ ಠಾಗೂರ್

ರಾಷ್ಟ್ರಗೀತೆಯ ಸಾರ


ಭಾರತ ಮಾತೆಯೇ! ಪ್ರಜೆಗಳ ಸುಖ ದುಃಖಗಳನ್ನು ನಿರ್ಣಯಿಸುವ ನೀನೇ ಎಲ್ಲರ ಮನದಲ್ಲೂ ನೆಲೆಸಿದ್ದೀಯೇ. ನಿನ್ನ ಶ್ರೀನಾಮ ಪಂಚಾಬ್, ಸಿಂಧು, ಗುಜರಾತ್, ಮಹಾರಾಷ್ಟ್ರ, ದ್ರಾವಿಡ, ಉತ್ಕಲ(ಒರಿಸ್ಸಾ), ಬಂಗಾಳ ಪ್ರಾಂತ್ಯಗಳನ್ನು ಮನೋದ್ದೀಪನಗೊಳಿಸುತ್ತದೆ.
ಮತ್ತೆ ನಿನ್ನ ಶ್ರೀನಾಮ, ವಿಂಧ್ಯ ಹಿಮಾಚಲ ಪರ್ವತ ಶ್ರೇಣಿಗಳಲ್ಲಿ ಪ್ರತಿಧ್ವನಿಸುತ್ತದೆ; ಯಮುನಾ ಗಂಗಾ ನದಿಗಳ ಮಧುರ ನಾದದಲ್ಲಿ ಲೀನವಾಗುತ್ತದೆ; ಹಿಂದೂ ಮಹಾಸಾಗರದ ಅಲೆಗಳಲ್ಲಿ ನಮನಗೊಳ್ಳುತ್ತದೆ. ಅವು ನಿನ್ನ ಕೃಪೆಯನ್ನು ಬೇಡುತ್ತದೆ; ನಿನ್ನ ಕೀರ್ತಿಯನ್ನು ಹರಡುತ್ತವೆ. ಭಾರತದ ಸುಖ ದುಃಖಗಳನ್ನು ನಿರ್ಣಯಿಸುವ ತಾಯೇ! ನಿನಗೆ ಜಯಹೇ! ಜಯಹೇ! ಜಯಹೇ!



ತಮಿಳು ತಾಯಿ ಪ್ರಾರ್ಥನೆ

ನೀರಾರುಂ ಕಡಲುಡುತ್ತ ನಿಲಮಡಂದೈಕ್ಕಿಳಿಲೊಳುಗುಂ
ಸೀರಾರುಂ ವದನಮೆನತ್ತಿಗಳ್ ಭರತ ಖಂಡಮಿದಿಲ್
ತೆಕ್ಕಣಮುಂ ಅದಿಲ್ ಸಿರಂದ ದ್ರಾವಿಡನಲ್ ತಿರುನಾಡುಂ
ತಕ್ಕಸಿರು ಪಿರೈನುದಲುಂ ತರಿತ್ತನರುಂ ತಿಲಗಮುಮೇ
ಅತ್ತಿಲಗ ವಾಸನೈಪೋಲ್ ಅನೈತ್ತುಲಗುಂ ಇನ್ಬಮುರ
ಎತ್ತಿಸೈಯುಂ ಪುಗಳ್ ಮಣಕ್ಕ ಇರುಂದ ಪೆರುಂ ತಮಿಳಣಂಗೇ!
ತಮಿಳಣಂಗೇ!
ಉನ್ ಸೀರಿಳಮೈತ್ತಿರಂವಿಯಂದು ಸೆಯಲ್ ಮರಂದು ವಾಳ್ತುದುಮೇ!
ವಾಳ್ತುದುಮೇ!
ವಾಳ್ತುದುಮೇ!

ಮನೋನ್ಮಣೀಯಂ ಪಿ.ಸುಂದರನಾರ್



ತಮಿಳ್ ತಾಯಿಯ ಪ್ರಾರ್ಥನೆಯ ಸಾರ

ಕಡಲುಡುಗೆಯಾದ ಭೂಮಾತೆಯ ಸುಂದರ ವದನದಂತಿರುವ ಭಾರತದ ತೆರೆ ನೊಸಲಿನಂತಿರುವ ದಖ್ಖನದಲ್ಲಿ, ಶ್ರೀಗಂಧದ ತಿಲಕವಿಟ್ಟಂತಿರುವ ನಲ್ನಾಡು ದ್ರಾವಿಡ, ಆ ತಿಲಕದ ಸುಗಂಧದಂತೆ ಸರ್ವ ಲೋಕಕ್ಕೆ ಸಂತೋಷ ವರ್ಧಿಸುತ್ತಿರುವಂತೆ ಎಲ್ಲಾ ದಿಕ್ಕುಗಳಲ್ಲೂ ಕೀರ್ತಿ ಘಮಘಮಿಸುತ್ತಿರುವ ತಮಿಳುತಾಯೇ, ನಿನ್ನ ಗಂಭೀರವಾದ ಚಿರಯೌವನವನ್ನು ನೆನೆದು ಅಚ್ಚರಿಯಿಂದ ಮೈಮರೆತು ಹಾಡಿ ಹೊಗಳುತ್ತೇನೆ.



ರಾಷ್ಟ್ರೀಯ ಸಮಗ್ರತೆಯ ಪ್ರತಿಜ್ಞೆ

ರಾಷ್ಟ್ರದ ಸ್ವಾತಂತ್ರ್ಯ ಮತ್ತು ಒಗ್ಗಟ್ಟನ್ನು ಕಾಪಾಡುವ ಮತ್ತು ಬಲಪಡಿಸುವ ಕಾರ್ಯದಲ್ಲಿ ನಾನು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ ಎಂದು ಹೃತ್ಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೆ ಎಂದೂ ನಾನು ಹಿಂಸೆಗೆ ಆಸ್ಪದ ಕೊಡುವುದಿಲ್ಲವೆಂದೂ ಮತೀಯ, ಭಾಷಿಕ, ಪ್ರಾದೇಶಿಕ, ರಾಜಕೀಯ ಅಥವಾ ಆರ್ಥಿಕ ಸಂಕಷ್ಟಗಳ ಸಂದರ್ಭಗಳಲ್ಲಿ ಎಲ್ಲಾ ಭಿನ್ನಾಭಿಪ್ರಾಯಗಳು ಮತ್ತು ವಿವಾದಗಳು ಶಾಂತಿಯುತವಾಗಿಯು ಸಂವಿಧಾನಕ್ಕನುಸಾರವಾಗಿಯೂ ಪರಿಹರಿಸುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತೇನೆ.



ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಒಡ ಹುಟ್ಟಿದವರು. ನನ್ನ ದೇಶವನ್ನು ನಾನು ಬಹಳ ಪ್ರೀತಿಸುತ್ತೇನೆ. ಈ ನಾಡಿನ ಭವ್ಯ ಪರಂಪರೆಯನ್ನೂ ವೈಶಿಷ್ಟವನ್ನೂ ಕಂಡು ಹೆಮ್ಮೆಪಡುತ್ತೇನೆ. ಈ ನಾಡಿನ ಹಿರಿಮೆಯನ್ನು ಹೆಚ್ಚಿಸಲು ಅನವರತ ದುಡಿಯುತ್ತೇನೆ. ನನ್ನ ತಂದೆ ತಾಯಿಗಳು ಮತ್ತು ಹಿರಿಯರನ್ನು ನಾನು ಗೌರವಿಸುತ್ತೇನೆ. ಎಲ್ಲರೊಡನೆಯೂ ಪ್ರೀತಿ ಹಾಗೂ ಗೌರವದಿಂದ ನಡೆದುಕೊಳ್ಳುತ್ತೇನೆ. ನನ್ನ ನಾಡಿಗೂ, ನನ್ನ ನಾಡಿನ ಪ್ರಜೆಗಳಿಗೂ ಸೇವೆ ಮಾಡಲು ಮುಂದೆ ನಿಲ್ಲುತ್ತೇನೆ. ಅವರ ಏಳಿಗೆಯನ್ನೂ ಸಮೃದ್ಧಿಯನ್ನೂ ಹೊಂದುವುದನ್ನು ಕಂಡು ನಾನು ಅತ್ಯಾನಂದ ಪಡುತ್ತೇನೆ.


ಮುನ್ನುಡಿ

ಪಠ್ಯಪುಸ್ತಕದೊಳಗೆ. . .

> ಕನ್ನಡ ಏನೆ ಕುಣಿದಾಡುವುದೆನ್ನೆದೆ!
> ಕನ್ನಡ ಏನೆ ಕಿವಿ ನಿಮಿರಿವುದು! - **ಕುವೆಂಪು**

ತಮಿಳುನಾಡಿನ ವಿಶಿಷ್ಟ ಸಂಸ್ಕೃತಿ ಭಾಷೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಗಮನದಲ್ಲಿಟ್ಟುಕೊಂಡು ತಮಿಳುನಾಡು ರಾಜ್ಯ ಶಿಕ್ಷಣ ನೀತಿ 2025 ಅನ್ನು ರೂಪಿಸಲಾಗಿದೆ. ಇದು ಮಕ್ಕಳಿಗೆ ಮೂಲಭೂತ ಸಾಕ್ಷರತೆಯ ಅವಶ್ಯಕತೆ ಮತ್ತು ಶಿಕ್ಷಣ ಪ್ರಮುಖ ಅಂಶವೆಂದು ಗುರುತಿಸುತ್ತದೆ ಮತ್ತು ತಮಿಳುನಾಡಿನ ಪ್ರತಿಯೊಂದು ಮಗುವೂ ಕೇಳುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು ಸೇರಿದಂತೆ ವಯಸ್ಸಿಗೆ ಸೂಕ್ತವಾದ ಮೂಲ ಭಾಷಾ ಕೌಶಲ್ಯಗಳನ್ನು ಪಡೆದುಕೊಳ್ಳುತ್ತದೆ ಎಂದು ಒತ್ತಿ ಹೇಳುತ್ತದೆ. ಭಾಷೆ ಎಲ್ಲಾ ವಿಷಯಗಳನ್ನೂ ಕಲಿಯಲು ಅಡಿಪಾಯ ರೂಪಿಸುವುದರಿಂದ ಮಕಳು ತಮ್ಮ ಅಂತರ್ಗತ ಸಮಸ್ಯೆಗಳನ್ನು ಕಂಡುಕೊಳ್ಳಲು ಮತ್ತು ಅಭಿವೃದ್ಧಿಪಡಿಸಲು ಮತ್ತು ಸಮಾಜದಲ್ಲಿ ಸಾಮರ್ಥ್ಯದಿಂದ ಬದುಕಲು ಮಾರ್ಗದರ್ಶನ ನೀಡಲು ಈ ಪಠ್ಯಪುಸ್ತಕವನ್ನು ರಚಿಸಲಾಗಿದೆ.

ಕುತೂಹಲ ಮತ್ತು ಹೊಸದನ್ನು ಕಂಡು ಹಿಡಿಯುವ ಮಕ್ಕಳ ಸ್ವಭಾವವನ್ನು ಗುರುತಿಸುವ ಈ ಪಠ್ಯಪುಸ್ತಕವು ಅವರಿಗೆ ಪರಿಚಿತ ಅಥವಾ ಹತ್ತಿರ ಮತ್ತು ಪರಿಚಯವಾಗಿರುವ ವಿಷಯಗಳ ಆಧಾರದ ಮೇಲೆ ಪಾಠಗಳನ್ನು ಮತ್ತು ಭಾಷಾ ಆಟಗಳು ಇತ್ಯಾದಿಗಳನ್ನು ಪ್ರಸ್ತುತಪಡಿಸುತ್ತದೆ.



ಪಠ್ಯಕ್ರಮ

ಪ್ರತಿಯೊಂದು ಪಾಠವೂ ಚಿಂತನೆಗೆ ಅವಕಾಶ ಮಾಡಿಕೊಡುವ ಪ್ರಶ್ನೆಗಳಿಂದ ಪ್ರಾರಂಭವಾಗುತ್ತದೆ. ಮಕ್ಕಳು ಸ್ವಂತ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಂಡುಕೊಳ್ಳುವ ರೀತಿಯಲ್ಲಿ ಪಾಠವನ್ನು ರಚಿಸಲಾಗಿದೆ. ಇದು ಅವರ ಸ್ಮರಣಶಕ್ತಿ ಮತ್ತು ಗ್ರಹಿಕೆಯ ಕೌಶಲ್ಯವನ್ನು ಬಲಪಡಿಸುತ್ತದೆ. ಮಕ್ಕಳು ಪಡೆದುಕೊಳ್ಳಬೇಕಾದ ಮೂಲಭೂತ ಭಾಷಾ ಕೌಶಲ್ಯಗಳಾದ ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದನ್ನು ಪಠ್ಯಕ್ರಮದಲ್ಲಿ ಈ ಕೆಳಗಿನಂತೆ ಪ್ರಸ್ತುತಪಡಿಸಲಾಗಿದೆ.

ಘಟಕ 1

1. **ನನ್ನ ನೆನಪಿನಲ್ಲಿ** (ಮೊದಲ 15 ದಿನಗಳವರೆಗಿನ ಚಟುವಟಿಕೆಗಳು)
   - ಪೂರ್ವ ಸಿದ್ಧತಾ ಚಟುವಟಿಕೆಗಳು.
2. **ಒಳ್ಳೆಯ ಹವ್ಯಾಸಗಳ**
   - ವಸ್ತುಗಳನ್ನು ಸಂಗ್ರಹಿಸುವುದು
3. **ಮಿನುಗುವ ತಾರೆಗಳು...**(ಪದ್ಯ)
   - ಹಾಡಿನ ತಂತ್ರಗಳನ್ನು ಉಪಯೋಗಿಸಿ ಹಾಡುವುದು

ಘಟಕ 2

4. **ಕಾಗೆ ಮತ್ತು ಗುಬ್ಬಚ್ಚಿಯ ಕಥೆ**
   - ನೀತಿ : ಎಲ್ಲರಿಗೂ ಸಹಾಯ ಮಾಡುವ ಗುಣವನ್ನು ಹೊಂದಿರಬೇಕು.
5. **ನಾಯಿಮರಿಯ ಹುಟ್ಟುಹಬ್ಬ...**
   - ಉಪಾಯ ಬಲ್ಲವನಿಗೆ ಅಪಾಯವಿಲ್ಲ

ಮೂಲಭೂತ ಕೌಶಲಗಳನ್ನು ಅಭಿವೃದ್ಧಿಪಡಿಸುವ ತರಬೇತಿ ಚಟುವಟಿಕೆಗಳು


ಆಲಿಸುವುದು, ಮಾತನಾಡುವುದು
ಆಲಿಸುವುದನ್ನು ಅರ್ಥ ಮಾಡಿಕೊಂಡು ತಮ್ಮದೇ ಶೈಲಿಯಲ್ಲಿ ಮಾತನಾಡುವುದು

ಓದುವುದು
ಅರ್ಥ ಮಾಡಿಕೊಂಡು ಓದುವುದು, ವೇಗವಾಗಿ ಆಸಕ್ತಿಯಿಂದ ಹುಡುಕಿ ಓದುವುದು

ಬರೆಯುವುದು
ಲಿಖಿತ ಅಭಿವ್ಯಕ್ತಿ, ಸೃಜನಶೀಲತೆಯನ್ನು ಪ್ರದರ್ಶಿಸುವುದು

ಪಠ್ಯ ಪುಸ್ತಕದಲ್ಲಿ ಕಲಿತದ್ದನ್ನು ದೃಢಪಡಿಸುವ ಮೌಲ್ಯಮಾಪನ

- ಕಲಿತದ್ದನ್ನು ಮತ್ತೆ ನೆನಪಿಸಿಕೊಳ್ಳುವ ಭಾಗ – ನನ್ನ ನೆನಪಿನಲ್ಲಿ
- ಕಲಿತಿದ್ದನ್ನು ಪರೀಕ್ಷಿಸುವ ಭಾಗ ಯೋಚಿಸಿ ಉತ್ತರಿಸುವುದು
  ಕಥೆ ಹೇಳುವುದು, ಹಾಡುವುದು. – ಕಲಿಕೆಯ ಪ್ರಯಾಣ
- ಮಕ್ಕಳು ತಾವು ಕಲಿತದ್ದನ್ನು ತಿಳಿದುಕೊಳ್ಳುವ ಭಾಗ – ನಾನು ಕಲಿತದ್ದು
- ಪ್ರತಿ ಘಟಕಕ್ಕೂ ನಿರಂತರ ಮೌಲ್ಯಮಾಪನ – ನಾನೇ ಮಾಡುತ್ತೇನೆ



ಕೊನೆಯದಾಗಿ ಈ ಪಠ್ಯಪುಸ್ತಕವು ಪ್ರತಿಯೊಂದು ಮಗುವೂ ಭವಿಷ್ಯದ ಜೀವನಕ್ಕೆ ಬೇಕಾದ ಶಾಶ್ವತವಾದ ಶೈಕ್ಷಣಿಕ ಅಭಿಪ್ರಾಯವನ್ನು ಪಡೆಯುವುದು ಮತ್ತು ಯಾವುದೇ ಮಗುವೂ ಹಿಂದೆ ಉಳಿಯದಂತೆ ಸಮಾನ ಅವಕಾಶಗಳೊಂದಿಗೆ ಮೂಲಭೂತ ಸಾಕ್ಷರತೆಗಳನ್ನು ಸಾಧಿಸುವುದನ್ನು ನಿರೀಕ್ಷಿಸಲಾಗಿದೆ.

ಮೂರನೇ ತರಗತಿ

STANDARD THREE

ಅವಧಿ – I

TERM - I

ಕನ್ನಡ ಕಸ್ತೂರಿ

KANNADA READER



ಪರಿವಿಡಿ

ಘಟಕ	ಶೀರ್ಷಿಕೆ	ಪುಟ ಸಂಖ್ಯೆ
1	1. ನನ್ನ ನೆನಪಿನಲ್ಲಿ...	2
	2. ಒಳ್ಳೆಯ ಹವ್ಯಾಸಗಳು	15
	3. ಮಿನುಗುವ ತಾರೆಗಳು...	29
2	4. ಕಾಗೆ ಮತ್ತು ಗುಬ್ಬಚ್ಚಿಯ ಕಥೆ	39
	5. ನಾಯಿ ಮರಿಯ ಹುಟ್ಟುಹಬ್ಬ...	48



ಘಟಕ 1

1. ನನ್ನ ನೆನಪಿನಲ್ಲಿ...

ನನ್ನ ಬಗ್ಗೆ...



ನಮಸ್ಕಾರ !

ನನ್ನ ಹೆಸರು : _____

ನನಗೆ ಇಷ್ಟವಾದವರ ಹೆಸರು : _____

ನನಗೆ ಇಷ್ಟವಾದ ಆಟ : _____

- ತರಗತಿಯಲ್ಲಿ ನನಗೆ ಇಷ್ಟವಾದುದು.
- ನಾನು ಇಷ್ಟಪಟ್ಟು ಮಾಡುವುದು.
- ತರಗತಿಯಲ್ಲಿ ಬದಲಾವಣೆ ಬಯಸುತ್ತೇನೆ.
- ನಾನು ಕಲಿಯಲು ಬಯಸುತ್ತೇನೆ.

ಇಂದು ನನ್ನ ಭಾವನೆಗಳು


ಸಂತೋಷ ○


ಆಶ್ಚರ್ಯ ○


ದುಃಖ ○


ಅಳು ○


ಭಯ ○



ನಾನು ನನ್ನನ್ನು ಇಷ್ಟಪಡುತ್ತೇನೆ. ಏಕೆಂದರೆ ನಾನು,

- ☐ ಎಲ್ಲರ ಜೊತೆ ಹೊಂದಿಕೊಳ್ಳುತ್ತೇನೆ.
- ☐ ಚೆನ್ನಾಗಿ ಮಾತನಾಡುತ್ತೇನೆ.
- ☐ ನನ್ನ ಭಾವನೆಗಳನ್ನು ತಿಳಿಸುತ್ತೇನೆ.
- ☐ ಬೇರೆಯವರ ಭಾವನೆಗಳಿಗೆ ಸ್ಪಂದಿಸುತ್ತೇನೆ.
- ☐ ಸಹಾಯ ಮಾಡುತ್ತೇನೆ.
- ☐ ಸಮಯವನ್ನು ವ್ಯರ್ಥ ಮಾಡುವುದಿಲ್ಲ.
- ☐ ಹೊಸ ವಿಷಯವನ್ನು ತಿಳಿದುಕೊಳ್ಳಲು ಇಷ್ಟಪಡುತ್ತೇನೆ.

ನಿಮಗೆ ಇಷ್ಟವಾದವುಗಳಿಗೆ ಮಾತ್ರ ✓ ಗುರುತು ಹಾಕಿರಿ.

ನಾನು ವಿಶೇಷತೆಯಿಂದ ಕೂಡಿರುವೆನು. ಇಂತಿ,

ನನ್ನಂತೆ ಯಾರೂ ಇಲ್ಲ / ನನಗೆ ಯಾರೂ ಸಾಟಿ ಇಲ್ಲ. .....

ವಂದನೆಗಳು!

ಪ್ರಕೃತಿಯ ಸೊಬಗು.



ಗಿಡದಲ್ಲಿ ಅರಳಿದ ಹೂವುಗಳು ಚಂದ
ಮಾವಿನ ಹಣ್ಣಿನ ರುಚಿ ಚಂದ
ನವಿಲಿನ ಬಣ್ಣಬಣ್ಣದ ಗರಿಗಳು ಚಂದ
ಕೋಗಿಲೆ ಹಾಡು ಬಲುಚಂದ !



ಹಗಲಿಗೆ ಸೂರ್ಯನು ಚಂದ
ಇರುಳಿಗೆ ಚಂದ್ರನು ಚಂದ
ಕಾಮನಬಿಲ್ಲಿಗೆ ಏಳು ಬಣ್ಣಗಳು ಚಂದ
ಬಾನಂಗಳದಲ್ಲಿ ಮಿನುಗುವ ನಕ್ಷತ್ರಗಳು ಚಂದ !





ಮೇಘಗಳು ಮಳೆಯಾಗಿ ಸುರಿದರೆ ಚಂದ
ಕಡಲಿಗೆ ಅಲೆಗಳು ಅಪ್ಪಳಿಸಿದರೆ ಚಂದ
ವಸಂತ ಕಾಲಕ್ಕೆ ಮಾವು ಚಿಗುರಿದರೆ ಚಂದ
ಜೀವ ರಾಶಿಗಳಿಗೆ ಆಶ್ರಯ ನೀಡಿದ ಭೂತಾಯಿ ಚಂದ !



ಝುಳು ಝುಳು ಹರಿಯುವ ನದಿಗಳು ಚಂದ
ಚಿಲಿಪಿಲಿ ಕಲರವ ಮಾಡುವ ಪಕ್ಷಿಗಳು ಚಂದ ಹಸಿರಿನಿಂದ
ಕಂಗೊಳಿಸುವ ಮರಗಿಡ ಬಳ್ಳಿಗಳು ಚಂದ
ಪ್ರಕೃತಿಯ ಸೊಬಗನು ಸವಿಯಲು ಬಲು ಚಂದ !


ಹಾಡಿನ ತಂತ್ರಗಳನ್ನು ಬಳಸಿಕೊಂಡು ನೀವು ಹಾಡಬಹುದು.

ಇಷ್ಟವಾದ ಚಿತ್ರಗಳನ್ನು ಬರೆದು ಬಣ್ಣ ಹಚ್ಚಿರಿ.











ನೀವು ಗಮನಿಸಿ ಚೆಂಡನ್ನು ಹಿಡಿಯಬೇಕು.

ಪ್ರಾಣಿ ಪಕ್ಷಿಗಳ ಹೆಸರಿಗೆ ವೃತ್ತ ಹಾಕಿ ಬರೆಯಿರಿ.



ಹ	ಸು	ಜೀ	ಕು	ದು	ರೆ
ದ್ದು	ಗ	ಶಿ	ರಿ	ಕಾ	ಗೆ
ಆ	ನೆ	ವ	ನ	ವಿ	ಲು
ಡು	ಳು	ರಾ	ಗು	ಬ್ಬ	ಚ್ಚಿ




1. ಹಸು
2. ಕಾಗೆ
3.
4.
5.
6.
7.
8.

ವೃತ್ತ ಹಾಕದ ಅಕ್ಷರಗಳನ್ನು ಕ್ರಮಪಡಿಸಿ ಪದ ರಚಿಸಿ.



_____ ಭೂಮಿಯ ಮೇಲಿವೆ.



ಅಗತ್ಯವಿರುವ ವಸ್ತುಗಳನ್ನು ಸೂಕ್ತವಾದ ಸ್ಥಳದಲ್ಲಿ ಬರೆಯಿರಿ.



ನೀರು ಹಾಲು ಸಕ್ಕರೆ ನೀರಿನ ಬಿಂದಿಗೆ ಚಾಕು ಬೆಂಕಿ ಪೆಟ್ಟಿಗೆ ಬಾಚಣಿಗೆ ಒಲೆ ಪಾದರಕ್ಷೆ ಕಾಫಿಪುಡಿ ಚೊಂಬು ಕಂಬಳಿ ಕರವಸ್ತ್ರ ನೀರಿನ ಬಿಂದಿಗೆ ಆಹಾರ ತಿಂಡಿಗಳು ಏಲಕ್ಕಿ ಕೈಚೀಲ ಸೀಸದ ಕಡ್ಡಿ ಸೋಸುವ ಸಲಕರಣೆ ಪಾತ್ರೆ ಸೇಬು ಉಡುಪುಗಳು ಹಲ್ಲು ಉಜ್ಜುವ ಬ್ರಷ್ ಬರೆಯುವ ಪುಸ್ತಕ ಸೋಡಉಪ್ಪು

ಹಣ್ಣಿನ ರಸ ತಯಾರಿಸಲು..

ಸಕ್ಕರೆ,



ಕಾಫಿ ತಯಾರಿಸಲು...

ನೀರು,



ಶಾಲೆಗೆ ಹೋಗಲು...

ಕೈಚೀಲ,



ಪ್ರವಾಸ ಹೋಗಲು.

ಕೈಚೀಲ,





ಬಣ್ಣದ ಅಕ್ಷರ ಬದಲಾಯಿಸಿ, ಸರಿಯಾದ ಪದ ರಚಿಸಿ ವಾಕ್ಯ ಬರೆಯಿರಿ.

1. ಮರದಲ್ಲಿ ಮಣ್ಣುಗಳು ಬಿಟ್ಟಿವೆ. : ಮರದಲ್ಲಿ ಹಣ್ಣುಗಳು ಬಿಟ್ಟಿವೆ.

2. ಬೆಳಿಗ್ಗೆ ಕೋಸೆ ತಿಂದನು. : _____

3. ನನ್ನ ಗಾಳಿರಟ ಹಾರಿತು : _____

4. ನದಿಯಲ್ಲಿ ರೆಪ್ಪೆ ಜಿಗಿಯಿತು. : _____

5. ನಾನು ಪ್ರತಿದಿನ ಮಾಲೆಗೆ ಹೋಗುತ್ತೇನೆ. : _____

ಚಿತ್ರಗಳನ್ನು ಗಮನಿಸಿ ವಾಕ್ಯಗಳನ್ನು ಬರೆಯಿರಿ.




ಆಡುತ್ತಿದ್ದಾರೆ.

ಮಕ್ಕಳು ಚೆಂಡಾಟವನ್ನು ಆಡುತ್ತಿದ್ದಾರೆ.




ತಿನ್ನುವುದು.




ಹತ್ತುವುದು.

ಭರ್ತಿ ಮಾಡೋಣ.

1. ಕಾಡಿನಲ್ಲಿ _____ ಓಡುತ್ತಿವೆ.

2. ಕೊಳದಲ್ಲಿ _____ ಈಜುತ್ತಿವೆ.

3. ಮರದಿಂದ _____ ಹಾರುತ್ತಿವೆ.

4. ಬಣ್ಣದ ಚಿಟ್ಟೆ _____ ವನ್ನು ಹೀರುತ್ತಿದೆ.



ಹುಟ್ಟುಹಬ್ಬ



ರವಿಯ ತಂದೆ ಮತ್ತು ತಾಯಿ
ಸಂಬಂಧಿಕರನ್ನು ದೂರವಾಣಿ
ಮೂಲಕ ಆಹ್ವಾನಿಸಿದರು.



ಎಲ್ಲರೂ ತಪ್ಪದೇ ಆಗಮಿಸಬೇಕು.



ಹುಟ್ಟು ಹಬ್ಬದ ಸಮಾರಂಭಕ್ಕೆ
ಎಲ್ಲರಿಗೂ ಸ್ವಾಗತ.

ಹುಟ್ಟುಹಬ್ಬದ ಶುಭಾಶಯಗಳು! ರವಿ.



ಹುಟ್ಟುಹಬ್ಬ ಆಚರಿಸುವ ದೃಶ್ಯ.




ಹುಟ್ಟು ಹಬ್ಬಕ್ಕೆ ಉಡುಗೊರೆಯನ್ನು
ನೀಡುತ್ತಿರುವ ದೃಶ್ಯ.

ಎಲ್ಲರೂ ಭೋಜನ ಮಾಡೋಣ, ಬನ್ನಿ.



ಭೋಜನ ಮಾಡುವ ದೃಶ್ಯ.



ರವಿಗೆ ಯಾವ ಸಂಬಂಧ? ಬರೆಯಿರಿ.



ತಾಯಿಯ ಅಣ್ಣ
_____

ತಾಯಿಯ ಅಕ್ಕ
_____

ತಾಯಿಯ ತಾಯಿ
_____



ರವಿ

ತಂದೆಯ ತಮ್ಮ
_____

ತಾಯಿಯ ತಂಗಿ
_____

ತಂದೆಯ ಅಣ್ಣ
_____

ತಂದೆಯ ತಂಗಿ
_____

ಸಂಬಂಧಗಳನ್ನು ತಿಳಿದುಕೊಂಡು ಬರೆಯಬೇಕು.

ಕಥೆಯನ್ನು ಕ್ರಮಪಡಿಸಿ ಬರೆಯಿರಿ.



* ಮಾವಿನ ಮರದಲ್ಲಿ ಮಾವಿನ ಕಾಯಿಗಳು ಬಿಟ್ಟಿವೆ.
* ಮಾವಿನ ಸಸಿಯನ್ನು ನೆಡುವುದು ಮತ್ತು ನೀರು ಹಾಕುವುದು.
* ಮಾವಿನ ಮರದಲ್ಲಿ ಮಾವಿನ ಹಣ್ಣುಗಳು ಬಿಟ್ಟಿವೆ.
* ಮಾವಿನ ಗಿಡಕ್ಕೆ ನೀರು ಹಾಕುವುದು.
* ಮಾವಿನ ಕಾಯಿಯಿಂದ ಉಪ್ಪಿನ ಕಾಯಿ ತಯಾರಿಸಬಹುದು.
* ಮಾವಿನ ಮರ ದೊಡ್ಡದಾಗಿ ಬೆಳೆದಿದೆ.







1. **ಮಾವಿನ ಬೀಜವನ್ನು ಬಿತ್ತುವುದು ಮತ್ತು ನೀರು ಹಾಕುವುದು.**
2. _____
3. _____
4. _____
5. _____
6. _____







ಸರಿಯಾಗಿರುವುದಕ್ಕೆ ☑ ತಪ್ಪಾಗಿರುವುದಕ್ಕೆ ☒ ಬಣ್ಣ ಹಚ್ಚಿ.





ಹೂವಿನ ಗಿಡಕ್ಕೆ ನೀರು ಹಾಕುವುದು. ☐

ಹೂವಿನ ಗಿಡವನ್ನು ಕೀಳುವುದು. ☐

ಕಸವನ್ನು ರಸ್ತೆಯಲ್ಲಿ ಹಾಕುವುದು. ☐

ಕಸವನ್ನು ಕಸದ ಬುಟ್ಟಿಯಲ್ಲಿ ಹಾಕುವುದು. ☐









ಪುಸ್ತಕವನ್ನು ಓದುವುದು. ☐

ಮೊಬೈಲ್ ವೀಕ್ಷಣೆ ಮಾಡುವುದು. ☐



ನಾನು ಕಲಿತದ್ದು



1. ವಿಷಯವನ್ನು ಅರ್ಥ ಮಾಡಿಕೊಂಡು ಪದಗಳನ್ನು ಓದಲು ಸಾಧ್ಯವಾಗುತ್ತದೆ. ☐

2. ಭಾಷಾ ಆಟಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ. ☐

3. ಸಂಬಂಧಗಳನ್ನು ಅರ್ಥ ಮಾಡಿಕೊಂಡು ಮತ್ತು ಬಳಸಲು ಸಾಧ್ಯವಾಗುತ್ತದೆ. ☐

ಕಲಿತುಕೊಂಡ ಸಾಮರ್ಥ್ಯಕ್ಕೆ ✓ ಗುರುತು ಹಾಕಬೇಕು.
ನೀವು ಕಲಿತ ಫಲಿತಾಂಶಕ್ಕೆ ಅನುಗುಣವಾಗಿ ಬಣ್ಣ ಹಚ್ಚಬೇಕು.

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ

ಕ ಖ ಗ ಘ ಙ ಚ ಛ ಜ ಝ ಞ ಟ ಠ ಡ ಢ ಣ ತ ಥ ದ ಧ ನ ಪ ಫ ಬ ಭ ಮ ಯ ರ ಲ ವ ಶ ಷ ಸ ಹ ಳ



ನಾನು ಓದುವೆನು, ಬಣ್ಣ ಹಚ್ಚುವೆನು.

ಸ್ವರಾಕ್ಷರಗಳು

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ

ವ್ಯಂಜನಾಕ್ಷರಗಳು

ಗ ಘ ತ ಥ ಮ ದ ಛ ಚ ಯ ರ ಳ
ಜ ಧ ಡ ಭ ಖ ಞ ನ ಜ ಣ ಲ ಷ ವ
ಕ ಟ ಪ ಠ ಢ ಝ ಫ ಬ ಶ ಸ ಹ

ಆಟ ಊಟ ಮರ ವರ ಸರ
ಗಣ ವಣ ಓಟ ಬನ ಜಡ

ಅರಸ
ಚಮಚ
ಗರಗಸ
ನಯನ
ಕರಗ
ಕನಕ

ಕಲರವ
ಔಷಧ
ಉರಗ
ಜನರ
ಬಡವ
ಅಂಗಳ



ಕಂಡುಹಿಡಿ... ಕಂಡುಹಿಡಿ...






ಮೇಘ ತೆಗೆದುಕೊಂಡು ಹೋದ ವಸ್ತುಗಳು ಯಾವುವು? ವೃತ್ತ ಹಾಕಿರಿ.



ಉದ್ಯಾನವನದಲ್ಲಿ ಯಾವ ಕುರಿಮರಿ ಇಲ್ಲ ಎಂಬುದನ್ನು ಕಂಡುಹಿಡಿದು ವೃತ್ತ ಹಾಕಿರಿ.



2. ಒಳ್ಳೆಯ ಹವ್ಯಾಸಗಳು






ಹವ್ಯಾಸಗಳು

ನಾಣ್ಯಗಳು, ಅಂಚೆಚೀಟಿಗಳು,
ವಿವಿಧ ರೀತಿಯ ಲೇಖನಿಗಳು,
ಪ್ರಾಚೀನ ವಸ್ತುಗಳು, ಹರಳುಗಳು,
ಮಣಿಗಳು, ಚಿತ್ರಪಟಗಳು,
ಬೊಂಬೆಗಳು, ಮುಂತಾದ
ವಸ್ತುಗಳನ್ನು ನಾನು
ಸಂಗ್ರಹಿಸುತ್ತೇನೆ.







ಕಥೆ ಪುಸ್ತಕಗಳನ್ನು ಓದುವುದು, ವಾರ್ತಾಪತ್ರಿಕೆಗಳನ್ನು ಓದುವುದು, ಚಿತ್ರ ಬಿಡಿಸುವುದು, ಗಿಡಗಳನ್ನು ನೆಟ್ಟು ಬೆಳೆಸುವುದು, ದೂರದರ್ಶನ ವೀಕ್ಷಿಸುವುದು, ಸಂಗೀತ ಕೇಳುವುದು, ಕಥೆಗಳನ್ನು ಕೇಳುವುದು, ಗೆಳೆಯ ಗೆಳತಿಯರೊಂದಿಗೆ ಸೇರಿ ಆಟವಾಡುವುದು, ನೃತ್ಯ ಮಾಡುವುದು, ಪ್ರಕೃತಿಯನ್ನು ವೀಕ್ಷಿಸುವುದು, ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿಯುವುದು, ಇನ್ನೂ ಮುಂತಾದ ಹವ್ಯಾಸಗಳನ್ನು ರೂಢಿಸಿಕೊಂಡಿದ್ದೇನೆ.















ಹವ್ಯಾಸಗಳು ನಮ್ಮ ಮನಸ್ಸಿಗೆ ಸಂತೋಷವನ್ನು ಉಂಟು ಮಾಡುತ್ತವೆ. ಹಾಗೂ ನಮ್ಮನ್ನು ಕ್ರಿಯಾಶೀಲರನ್ನಾಗಿ ಮಾಡುತ್ತವೆ.

ಹವ್ಯಾಸಗಳು ಹೊಸ ಹೊಸ ಆವಿಷ್ಕಾರಗಳಿಗೆ ದಾರಿ ಮಾಡಿಕೊಡುತ್ತವೆ. ಮನುಷ್ಯನಿಗೆ ಕೆಲಸ ಮಾಡಲು ಬೇಕಾಗಿರುವುದು ಶಕ್ತಿ ಅಥವಾ ಚೈತನ್ಯ. ಅಂತಹ ಚೈತನ್ಯ ಸದಾ ಕಾಲ ನಮ್ಮ ಬಳಿ ಇರಬೇಕು ಎಂದರೆ ನಾವು ಹವ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಮನುಷ್ಯನಿಗೆ ಹವ್ಯಾಸ ಜೇನು ಬೆರೆಸಿರುವ ಹಾಲು ಕುಡಿದಷ್ಟು ಸಂತೋಷ ನೀಡುತ್ತದೆ.

ನಟನೆಯ ಮೂಲಕ ಆಟ



- ತಮಟೆ ಬಾರಿಸು ಎಂದು ಹೇಳಿದಾಗ ತಮಟೆ ಬಾರಿಸುವಂತೆ ನಟಿಸುವುದು.
- ಕೋಲು ಕೋಲನ್ನ ಎಂದು ಹೇಳಿದಾಗ ಎರಡು ಕೋಲುಗಳನ್ನು ಎರಡು ಕೈಯಲ್ಲಿ ಹಿಡಿದು ಕೋಲಾಟ ಆಡುತ್ತಿರುವಂತೆ ನಟಿಸಬೇಕು.

ಅಭ್ಯಾಸ ಮಾಡಿಕೊಳ್ಳೋಣ



1. ಅನುಸರಿಸಿ ಮತ್ತು ಓದಿರಿ.

ನೀವು ಓದಿದ ಪಾಠವನ್ನು ಕೇಳುವ ಮೂಲಕ,
ಅಥವಾ ಆಡಿಯೋ ಕೇಳುವ ಮೂಲಕ, ನೇರ ಅಂತರ್ಜಾಲ ಸಂಪರ್ಕದ ಮೂಲಕ ಅಧ್ಯಯನ ಮಾಡಬಹುದು



2. ಈ ಪಾಠದಲ್ಲಿ ನಿಮಗೆ ಇಷ್ಟವಾದ ಪದಗಳನ್ನು ಬರೆಯಿರಿ.

1. _____
2. _____
3. _____
4. _____
5. _____
6. _____



ಯಾರು ಹೆಚ್ಚು ಪದಗಳನ್ನು ಬರೆದಿದ್ದಾರೆ ಎಂದು ನೋಡಲು ಗುಂಪಿನೊಂದಿಗೆ ಹೋಲಿಸಬೇಕು.

ಹೆಚ್ಚು ಪದಗಳನ್ನು ಒಂದೇ ರೀತಿ ಬರೆದ ಸ್ನೇಹಿತರ ಹೆಸರು:

ಒಂದೇ ರೀತಿ ಬರೆದ ಪದಗಳ ಸಂಖ್ಯೆ:

ಈ ಕೆಳಗಿನ ವಾಕ್ಯಗಳಿಗೆ ಉತ್ತರ ಬರೆಯಿರಿ.

1. ಈ ಪಾಠದಲ್ಲಿ ಅ ಆ ತ ತಾ ಅಕ್ಷರಗಳಿಂದ ಆರಂಭವಾಗುವ ಪದಗಳನ್ನು ಗುರುತಿಸಿ ಅಡಿಗೆರೆ ಎಳೆಯಿರಿ ಮತ್ತು ಆ ಪದಗಳನ್ನು ಇಲ್ಲಿ ಬರೆಯಿರಿ. _____,
   _____
2. ಈ ಕಥೆಯಿಂದ ಏನನ್ನು ರೂಢಿಸಿಕೊಳ್ಳುವೆ? : _____, _____
3. ಈ ಕಥೆಯಲ್ಲಿ ನಿಮಗೆ ಇಷ್ಟವಾದುದು ಯಾವುದು?
   _____

ಪಾಠದಲ್ಲಿ ಸೂಕ್ತವಾದ ಉತ್ತರಗಳನ್ನು ನೀವು ಕಂಡುಕೊಳ್ಳಬೇಕು ಮತ್ತು ಅಡಿಗೆರೆ ಹಾಕಬೇಕು.

3. ಮಾತನಾಡೋಣ



ನನಗೆ ಇಷ್ಟವಾದ ಆಟ...



ನಿಮಗೆ ಇಷ್ಟವಾದ ಆಟಗಳು ಮತ್ತು ನಿಯಮಗಳ ಅನುಭವವನ್ನು ಕುರಿತು ಮಾತನಾಡಿರಿ.

4. ಓದಿ ಉತ್ತರವನ್ನು ಬರೆಯಿರಿ.



ಸೂಚನಾ ಫಲಕ

ಓದು	ಅಂಚೆಚೀಟಿ	ಆವಿಷ್ಕಾರ	ಕಥೆಗಳು	
ನಾಣ್ಯ	ಪಟಗಳು	ಮಣಿಗಳು	ಹರಳುಗಳು	ನೃತ್ಯ

1. ಎರಡಕ್ಷರದ ಪದಗಳು: _____, _____, _____
2. ಸ್ವರಾಕ್ಷರಗಳಿಂದ ಪ್ರಾರಂಭವಾಗುವ ಪದಗಳು: _____, _____,
   _____, _____
3. ವ್ಯಂಜನಾಕ್ಷರಗಳಿಂದ ಪ್ರಾರಂಭವಾಗುವ ಪದಗಳು: _____,_____,
   _____, _____

5. ಪಾಠದ ಸಾರಾಂಶವನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

ನನ್ನ ಹೆಸರು ಸುಮತಿ. ನಾನು ಪಂಚಾಯತ್ ಯೂನಿಯನ್ ಪ್ರಾಥಮಿಕ ಶಾಲೆಯಲ್ಲಿ ಮೂರನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ನಮ್ಮ ಮನೆಯಲ್ಲಿ ನಾನು ನನ್ನ ತಂದೆ ತಾಯಿ ಮತ್ತು ಅಜ್ಜ ಅಜ್ಜಿಯ ಜೊತೆ ವಾಸ ಮಾಡುತ್ತಿದ್ದೇನೆ. ನಾನು ಕೆಲವು ವಸ್ತುಗಳನ್ನು ಸಂಗ್ರಹಿಸಿಟ್ಟಿದ್ದೇನೆ. ಆ ವಸ್ತುಗಳು ಯಾವುವು ಎಂದರೆ ನಾಣ್ಯಗಳು, ಅಂಚೆ ಚೀಟಿಗಳು, ಪ್ರಾಚೀನ ವಸ್ತುಗಳು, ಹರಳುಗಳು, ಮುಂತಾದವು. ನನ್ನ ಹವ್ಯಾಸಗಳು ಕಥೆ ಪುಸ್ತಕವನ್ನು ಓದುವುದು, ವಾರ್ತಾಪತ್ರಿಕೆಗಳನ್ನು ಓದುವುದು, ಚಿತ್ರ ಬಿಡಿಸುವುದು, ದೂರದರ್ಶನ ವೀಕ್ಷಿಸುವುದು, ಸಂಗೀತ ಕೇಳುವುದು, ಕಥೆಗಳನ್ನು ಕೇಳುವುದು, ಗೆಳೆಯ ಗೆಳತಿಯೊಂದಿಗೆ ಸೇರಿ ಆಟವಾಡುವುದು ಮುಂತಾದ ಹವ್ಯಾಸಗಳನ್ನು ರೂಢಿಸಿಕೊಂಡಿದ್ದೇನೆ. ಹವ್ಯಾಸಗಳು ನಮ್ಮ ಮನಸ್ಸಿಗೆ ಸಂತೋಷವನ್ನು ಉಂಟು ಮಾಡುತ್ತವೆ ಹಾಗೂ ನಮ್ಮನ್ನು ಕ್ರಿಯಾಶೀಲರನ್ನಾಗಿ ಮಾಡುತ್ತವೆ.

ಓದಲು ತೆಗೆದುಕೊಂಡ ಸಮಯ

1. ___:___ 2. ___:___ 3. ___:___

ಪಾಠದ ಸಾರಾಂಶವನ್ನು ಓದಲು ತೆಗೆದುಕೊಂಡ ಸಮಯವನ್ನು ಸೂಚಿಸಬೇಕು.

1. ಸುಮತಿಯು ಯಾರ ಜೊತೆ ವಾಸವಾಗಿದ್ದಳು?

_____

2. ಸುಮತಿಯು ಸಂಗ್ರಹಿಸಿದ ಕೆಲವು ವಸ್ತುಗಳನ್ನು ಹೆಸರಿಸಿ.



_____

3. ಸುಮತಿಯು ಯಾರ ಜೊತೆ ಆಟವಾಡುತ್ತಿದ್ದಳು?

_____

6. ಉಕ್ತಲೇಖನ.

ಪುಸ್ತಕದಲ್ಲಿರುವಂತಹ ಪದಗಳನ್ನು ಆಲಿಸಿ ಬರೆಯಿರಿ.

7. ಸೂಕ್ತವಾದ ಪದಗಳನ್ನು ಆರಿಸಿ ಬರೆಯಿರಿ.



ಬಣ್ಣದ ಗರಿಗಳು ನಾಟ್ಯ

ಮೀನು ಕಪ್ಪೆ ಕೊಕ್ಕರೆ

ಹಣ್ಣು ಮರ ಕೆಂಪು ಕೊಕ್ಕು

ಆಕಾಶ ಮಳೆ ಬಣ್ಣಗಳು

ಕಾಮನಬಿಲ್ಲು



ನವಿಲು



ಕೊಳ



ಹಸಿರು ಗಿಳಿ



8. ಈ ಸಾಲುಗಳನ್ನು ಓದಿ ಆನಂದಿಸಿರಿ.



ಹೂವು ಹೂವು ಬಣ್ಣ ಬಣ್ಣದ ಹೂವು
ಹೂವು ಹೂವು ಚಂದದ ಹೂವು
ತೋಟದಲ್ಲಿ ಅರಳಿ ನಗುತ್ತಿರುವ ಹೂವು



9. ಮಾತನಾಡೋಣ ಬರೆಯೋಣ!



ಚಿತ್ರವನ್ನು ಗಮನಿಸಿ, ಅದಕ್ಕೆ ಸಂಬಂಧಿಸಿದ ವಾಕ್ಯಗಳನ್ನು ಬರೆಯಬೇಕು.

10. ಆಲಿಸಿ ಉತ್ತರವನ್ನು ಬರೆಯಿರಿ.

ಗಾಳಿಯಲ್ಲಿನ ಸುವಾಸನೆ

ಒಂದು ಊರಿನಲ್ಲಿ ರವಿ ಮತ್ತು ಭುವನ ಎಂಬ ಸಹೋದರ ಸಹೋದರಿಯರಿದ್ದರು. ಅವರು ಬೇಸಿಗೆಯ ರಜಕ್ಕೆ ತಮ್ಮ ಅಜ್ಜಿಯ ಊರಿಗೆ ಹೋದರು. ಅಜ್ಜ ಅಜ್ಜಿಯನ್ನು ಕಂಡು ತುಂಬಾ ಸಂತೋಷ ಪಟ್ಟರು. ನಂತರ ದೂರದರ್ಶನವನ್ನು ವೀಕ್ಷಿಸುತ್ತಿದ್ದರು. ಸ್ವಲ್ಪ ಸಮಯದಲ್ಲಿ ವಿದ್ಯುತ್ ಕಡಿತವಾಯಿತು. 'ಅಯ್ಯೋ! ಏನು ಮಾಡುವುದು ಈಗ'? ಎಂದು ಯೋಚಿಸಿದರು.

ಅಜ್ಜಿ ಒಂದು ಉಪಾಯವನು ಹೇಳಿದರು. 'ಅಜ್ಜನ ಜೊತೆ ಅವರು ತೋಟಕ್ಕೆ ಹೋಗಿ ಬನ್ನಿ' ಎಂದು ಹೇಳಿದರು. ಸರಿ ಎಂದು ಅಜ್ಜನ ಜೊತೆ ತೋಟಕ್ಕೆ ಹೋದರು. ಅಲ್ಲಿ ಸುಂದರವಾದ ತೋಟವನ್ನು ನೋಡುತ್ತಿದ್ದರು. ಬಿಳಿ ಬಣ್ಣದ ಹೂವುಗಳನ್ನು ನೋಡುತ್ತಾ ಇದ್ದಾಗ, 'ಇದು ಯಾವ ಹೂವು ಇಷ್ಟೊಂದು ಸುವಾಸನೆಯಿಂದ ಕೂಡಿದೆ'! ಎಂದು ಅಜ್ಜನನ್ನು ಕೇಳಿದರು. ಇದು ಮಲ್ಲಿಗೆ ಹೂವು ಎಂದು ಅಜ್ಜ ಹೇಳಿದರು. ನಂತರ ತೋಟದ ಮನೆಗೆ ಹೋದರು. ಅಲ್ಲಿ ಘಮ ಘಮ ಎಂದು ಸುವಾಸನೆ ಬೀರಿತು. ಇದು ಯಾವ ಹಣ್ಣು? ಎಂದು ಕೇಳಿದರು. ಅದಕ್ಕೆ ಅಜ್ಜ ಅದು ಹಲಸಿನ ಹಣ್ಣು ಎಂದು ಹೇಳಿದರು.

ಸರಿಯಾದ ಉತ್ತರ ಯಾವುದು ✓ ಗುರುತು ಹಾಕಿರಿ.


ಅ) ರವಿ ಮತ್ತು ಭುವನ ಮಲ್ಲಿಗೆ ಹೂವು ಮತ್ತು ಹಲಸಿನ ಹಣ್ಣಿನ ಸುವಾಸನೆ ಬಗ್ಗೆ ತಿಳಿದುಕೊಂಡರು ☐

ಆ) ರವಿ ಮತ್ತು ಭುವನ ಮಲ್ಲಿಗೆ ಹೂವು ಮತ್ತು ಹಲಸಿನ ಹಣ್ಣಿನ ಸುವಾಸನೆಯ ಬಗ್ಗೆ ಮೊದಲೇ ತಿಳಿದಿದ್ದರು. ☐

11. ಯೋಚಿಸಿ ಉತ್ತರಿಸಿ

- ನಾನು ಒಂದು ಪುಸ್ತಕ.
- ನಾನು ಮೇಜಿನ ಮೇಲೆ ಇದ್ದೇನೆ.
- ಈಗ ನಾನು ಶಾಲೆಯಲ್ಲಿ ಇದ್ದೇನೆ.

ಮೂರು ವಾಕ್ಯಗಳಿಗೆ ಸರಿಹೊಂದುವ ಚಿತ್ರಕ್ಕೆ ✓ ಗುರುತು ಹಾಕಿರಿ.







12. ಓದಿ ಉತ್ತರ ಬರೆಯಿರಿ.



ಜಾಣ ನರಿ

ಕಾಡಿನಲ್ಲಿ ಒಂದು ನರಿ ನಡೆದು ಹೋಗುತ್ತಿದ್ದಾಗ ಬೇರೆ ಪ್ರಾಣಿಗಳು 'ಓ ರಾಕ್ಷಸ! ಓ ರಾಕ್ಷಸ! ಓಡಿ..ಓಡಿ'.. ಎಂದು ನರಿಯನ್ನು ನೋಡಿ ಹೆದರಿ ಓಡಿದವು. ಏಕೆ ಅಂತ ನರಿಗೆ ಗೊತ್ತಾಗಲಿಲ್ಲ. ನರಿ ನೀರನ್ನು ಕುಡಿಯಲೆಂದು ಕೊಳದ ಬಳಿ ಬಂದಾಗ ಪ್ರತಿಬಿಂಬದಲ್ಲಿ ನೀಲಿಯಾಗಿರುವ ತನ್ನ ಶರೀರವನ್ನು ಕಂಡು ಅದಕ್ಕೆ ಎಲ್ಲ ಅರ್ಥವಾಯಿತು. ನರಿ ಉಪಾಯ ಮಾಡಿ ಎಲ್ಲ ಪ್ರಾಣಿಗಳನ್ನು ಕರೆದು ಹೇಳಿತು.'ನಾನು ದೇವರ ದೂತ ಇನ್ನು ಮುಂದೆ ನಾನೇ ನಿಮ್ಮ ರಾಜ' ಹೆದರಬೇಡಿ ಎಂದಿತು. ಪ್ರಾಣಿಗಳು ಅದನ್ನು ನಂಬಿ ನರಿಯನ್ನು ತಮ್ಮ ರಾಜನನ್ನಾಗಿ ಸ್ವೀಕರಿಸಿದವು. ನರಿ ಕಾಡಿನ ರಾಜನಾಗಿ ಸುಖವಾಗಿತ್ತು.

ಒಂದು ದಿನ ಕಾಡಿನಲ್ಲಿದ್ದ ಇತರ ನರಿಗಳು ಊಳಿಡುವುದನ್ನು ಕೇಳಿದ ನರಿಗೆ ತಡೆದುಕೊಳ್ಳಲಾಗಲಿಲ್ಲ. ಅದು ಕೂಡ ಜೋರಾಗಿ ಊಳಿಟ್ಟಿತು. ಅದನ್ನು ಕೇಳಿದ ಬೇರೆ ಪ್ರಾಣಿಗಳಿಗೆ ಈ ವಿಚಿತ್ರ ಪ್ರಾಣಿ ಯಾರು ಎಂದು ತಿಳಿದು ಹೋಯಿತು! ನರಿಯನ್ನು ಕಾಡಿನಿಂದ ಒದ್ದು ಓಡಿಸಿದವು!

ನೀತಿ: ಸತ್ಯವನ್ನು ಮುಚ್ಚಿಡಲು ಸಾಧ್ಯವಿಲ್ಲ

1. ನರಿಯು ಯಾವ ಬಣ್ಣದಿಂದ ಕೂಡಿತ್ತು?

   ಕೆಂಪು ಬಣ್ಣ ☐
   ಹಸಿರು ಬಣ ☐
   ನೀಲಿ ಬಣ್ಣ ☐

2. ಸರಿ ✓ ಅಥವಾ ತಪ್ಪು ✗ ಎಂದು ಗುರುತಿಸಿ.

   ನರಿಯು ಕಾಡಿನಲ್ಲಿ ವಾಸವಾಗಿತ್ತು.

   ಸರಿ ☐
   ತಪ್ಪು ☐



ಸುಮತಿಗೆ ಇಷ್ಟವಾದವು



- ವಸ್ತುಗಳನ್ನು ಸಂಗ್ರಹಿಸುವುದು.
- ಚಿತ್ರ ಬಿಡಿಸುವುದು.
- ರಜಾ ದಿನಗಳಲ್ಲಿ ಅಜ್ಜನ ಮನೆಗೆ ಹೋಗುವುದು.

ನನಗೆ ಇಷ್ಟವಾದವು...

_____

_____

_____



ಸ್ವರಗಳು – 15

ಅ ಆ ಇ ಈ ಉ ಊ ಋ ಎ ಏ ಐ ಒ ಓ

ಔ ಅಂ ಅಃ

ಹ್ರಸ್ವ ಸ್ವರಗಳು – 6	ಅ ಇ ಉ ಋ ಎ ಒ
ದೀರ್ಘಸ್ವಗಳು – 7	ಆ ಈ ಊ ಏ ಐ ಓ ಔ
ಯೋಗವಾಹಕಗಳು – 2	ಅಂ ಅಃ

ಬಣ್ಣ ಹಚ್ಚಿ ಹೆಸರನ್ನು ಬರೆಯಿರಿ.



ಒಂದು

ಹ್ರಸ್ವಸ್ವರ ಮತ್ತು ದೀರ್ಘಸ್ವರದ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು ಮತ್ತು ಅವುಗಳನ್ನು ಸರಿಯಾಗಿ ಉಚ್ಚರಿಸಲು ಪ್ರಯತ್ನಿಸಬೇಕು.



ವ್ಯಂಜನಗಳು 34

ಕ ಗ ಙ ಛ ಝ ಟ ಡ ಣ ಥ
ಖ ಘ ಚ ಜ ಞ ಠ ಢ ತ ದ
ಧ ನ ಪ ಬ ಮ ಲ ಶ
ಫ ಭ ಯ ರ ವ ಷ
ಸ ಹ ಳ

ವ್ಯಂಜನಗಳಲ್ಲಿ ಎರಡು ವಿಧ

1. ವರ್ಗೀಯ ವ್ಯಂಜನ
2. ಅವರ್ಗೀಯ ವ್ಯಂಜನ

ವರ್ಗೀಯ ವ್ಯಂಜನಗಳು 25

ಅಲ್ಪಪ್ರಾಣ

ಕ ಗ ಚ ಜ ಟ
ಡ ತ ದ ಪ ಬ

ಮಹಾಪ್ರಾಣ

ಖ ಘ ಛ ಝ ಠ
ಢ ಥ ಧ ಫ ಭ

ಅನುನಾಸಿಕಗಳು

ಙ ಞ ಣ
ನ ಮ

ಅವರ್ಗೀಯ ವ್ಯಂಜನಗಳು 9

ಯ ರ ಲ
ವ ಶ ಷ
ಸ ಹ ಳ

14. ನೀವು ಆಡಿರುವ ಆಟಗಳಿಗೆ ✓ ಗುರುತು ಹಾಕಿರಿ.





ಕೇರಂ ಬೋರ್ಡ್ ☐



ಕ್ರಿಕೆಟ್ ☐




ಗಿಲ್ಲಿ ದಾಂಡು ☐



ಅಳಗುಳಿಮನೆ ☐



ಚದುರಂಗ ☐




ಕಬಡ್ಡಿ ☐



ಓಡಿ ಹಿಡಿಯುವುದು ☐



ಕುಂಟೆಬಿಲ್ಲೆ ☐



ಬುಗುರಿ ಬಿಡಿಸುವುದು ☐

ಮಕ್ಕಳು ಆಡಿರುವ ಆಟಗಳ ಬಗ್ಗೆ ಸ್ನೇಹಿತರುಗಳ ಜೊತೆ ಚರ್ಚೆ ಮಾಡುವುದು.

15. ಕನ್ನಡ ಗಾದೆಗಳು



- ಕೈ ಕೆಸರಾದರೆ ಬಾಯಿ ಮೊಸರು.
- ಬೆಳೆಯುವ ಸಿರಿ ಮೊಳಕೆಯಲ್ಲಿ.
- ದೂರದ ಬೆಟ್ಟ ನುಣ್ಣಗೆ.

ಪದಗಳನ್ನು ಪದೇ ಪದೇ ಉಚ್ಚರಿಸಿ ಅಭ್ಯಾಸ ಮಾಡಿರಿ.



ಕಲಿಕಾ ಪಯಣ

ಸೃಜನಶೀಲ ಸಮಯ.

ಕಲ್ಪಿಸಿಕೊಂಡು ಕಥೆಯನ್ನು ಹೇಳಿ

- ಸಿಹಿಯಾದ ರುಚಿ ಹಣ್ಣುಗಳಿಗೆ ಹೇಗೆ ಬಂದಿತು. ನೀವು ಹೇಳಿ.
- ನವಿಲಿಗೆ ಬಣ್ಣ ಬಣ್ಣದ ಗರಿಗಳು ಹೇಗೆ ಬಂದವು?
- ತೆಂಗಿನ ಕಾಯಿಯಲ್ಲಿ ನೀರು ಹೇಗೆ ಬಂದಿತು?



ಒಂದು ಕಾಲ್ಪನಿಕ ಕಥೆಯನ್ನು ರಚಿಸಿ ಅದನ್ನು ಗುಂಪಿನೊಂದಿಗೆ ಹಂಚಿಕೊಳ್ಳಬೇಕು.

ನಾನು ಕಲಿತದ್ದು



1. ನನ್ನಿಂದ ಕಥೆಯನ್ನು ಹೇಳಲು ಸಾಧ್ಯವಾಗುತ್ತದೆ ☐ ☆☆☆
2. ಚಿತ್ರವನ್ನು ನೋಡಿ ಮಾತನಾಡಲು ಸಾಧ್ಯವಾಗುತ್ತದೆ ☐ ☆☆☆
3. ಹ್ರಸ್ವಸ್ವರ ದೀರ್ಘಸ್ವರ ಮತ್ತು ಯೋಗವಾಹಕಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಲು ಮತ್ತು ಅವುಗಳನ್ನು ಉಚ್ಚರಿಸಲು ಸಾಧ್ಯವಾಗುತ್ತದೆ ☐ ☆☆☆



ಕಲಿತುಕೊಂಡ ಕೌಶಲ್ಯಗಳಿಗೆ ✓ಗುರುತು ಹಾಕಬೇಕು. ಪಡೆದ ಸಾಧನೆಗೆ ಅನುಗುಣವಾಗಿ ಬಣ್ಣ ಹಚ್ಚಬೇಕು.

3. ಮಿನುಗುವ ತಾರೆಗಳು...



ಮಿನುಗುವ ಮಿನುಗುವ ತಾರೆಗಳೇ
ಬನ್ನಿರಿ ನಮ್ಮಯ ಅಂಗಳಕೆ॥
ನಿಮ್ಮೊಡನಾಡುವ ಆಸೆಯಿದೆ
ಒಪ್ಪಿಸಿ ಬನ್ನಿರಿ ತಿಂಗಳಿಗೆ
ಲಾಲಲ್ಲ ಲಾಲಲ್ಲ ಲಾಲಲಲ್ಲ...

ಅಪ್ಪನ ಹೆದರಿಕೆ ನನಗಿಲ್ಲ
ಅಮ್ಮನ ಪ್ರೀತಿಗೆ ಕೊನೆಯಿಲ್ಲ
ಹಾರುತ ಬನ್ನಿರಿ ತಾರೆಗಳೇ
ನಲಿ ಕಲಿ ಲೋಕದ ಬಂಧುಗಳೇ
ಲಾಲಲ್ಲ ಲಾಲಲ್ಲ ಲಾಲಲಲ್ಲ...

ತೇಲುವ ಮುಗಿಲಿನ ತೊಟ್ಟಿಲಲಿ
ಸಾಗುವ ಚಂದ್ರನ ನೌಕೆಯಲ್ಲಿ
ಹಾರುತ ಬನ್ನಿರಿ ಚಿಟ್ಟೆಗಳೇ
ನಲಿ ಕಲಿ ಲೋಕದ ಜಿಂಕೆಗಳೇ॥
ಲಾಲಲ್ಲ ಲಾಲಲ್ಲ ಲಾಲಲಲ್ಲ...

ಕುಣಿಯುವ ಸಂಜೆಯ ಸೊಬಗಿನಲ್ಲಿ
ನಲಿ ಕಲಿ ಶಾಲೆಯ ಬಯಲಿನಲಿ
ಕುಣಿಯುತ ಬನ್ನಿರಿ ಪುಟಾಣಿಗಳೇ
ನಲಿ ಕಲಿ ಶಾಲೆಯ ನವಿಲುಗಳೇ॥
ಲಾಲಲ್ಲ ಲಾಲಲ್ಲ ಲಾಲಲಲ್ಲ...

ಹಾಡಿನ ತಂತ್ರಗಳನ್ನು ಉಪಯೋಗಿಸಿ ಹಾಡುವುದು

ಅಭ್ಯಾಸ ಮಾಡೋಣ

1. ಹಾಡಿನಲ್ಲಿ ನಿಮಗಿಷ್ಟವಾದ ಪದಗಳನ್ನು ಬರೆಯಿರಿ.



1 _____ 4 _____

2 _____ 5 _____

3 _____ 6 _____

ತಾವು ಬರೆದಿರುವ ಅದೇ ಪದಗಳನ್ನು ಅಧಿಕವಾಗಿ ಬರೆದಿರುವವರು ಯಾರು? ಎಂಬುದನ್ನು ಗುಂಪಿನವರೊಂದಿಗೆ ಹೋಲಿಸಿ ನೋಡಬೇಕು.

ಒಂದೇ ತರಹ ಅಧಿಕ ಪದಗಳನ್ನು ಬರೆದ ಗೆಳೆಯರು: _____

ಒಂದೇ ತರಹ ಬರೆದ ಪದಗಳ ಸಂಖ್ಯೆ: _____

2. ಪದ್ಯದಲ್ಲಿ ಅಡಿಗೆರೆ ಹಾಕಿ ಬರೆಯಿರಿ.



1. ಒಂದೇ ರೀತಿಯ ಪ್ರಾಸ ಪದಗಳು:

   ತಾರೆಗಳೇ _____, _____, _____

   ತೊಟ್ಟಿಲಲಿ _____, _____, _____

2. ಪದ್ಯದಲ್ಲಿ ಹೊಸದಾಗಿ ಕಲಿತ ಪದಗಳು:

   _____

ಸರಿಯಾದ ಉತ್ತರಗಳನ್ನು ಪದ್ಯದಲ್ಲಿ ಕಂಡು ಹಿಡಿದು ಗೆರೆ ಹಾಕಬೇಕು.

3. ವಾಕ್ಯವನ್ನು ರಚಿಸಿರಿ.

ಒಳ್ಳೆಯ ಗೆಳತಿ

ನನ್ನ  ನೀನು

ನೀನು ನನ್ನ ಒಳ್ಳೆಯ ಗೆಳತಿ

1 2 3 4

_____

ಬರೋಣ ಖರೀದಿಸಿಕೊಂಡು 

ಹಣ್ಣನ್ನು  ಬಾ

_____

ಇರುವೆಗಳು ಮುತ್ತಿದ

ಓಹ್!  __ __

_____

ಓಹ್! 

_____

__ __ _____

4. ಪದ್ಯವನ್ನು ಪೂರ್ಣಗೊಳಿಸಿ.







ನಲಿದು ನಲಿದು ನವಿಲು ಬಂದಿತು
ಹಾರಿ ಹಾರಿ ಗಿಳಿಯು ಬಂದಿತು
ಸಾಲು ಸಾಲಾಗಿ ಇರುವೆ ಬಂದಿತು
ನೆಗೆದು ನಗೆದು ಕೋತಿ ಬಂದಿತು.



_____





_____

_____

ಹಾಡಿ ಹಾಡಿ ಹುಡುಗಿ ಬಂದಳು.



ಕುಪ್ಪಳಿಸಿ ಕುಪ್ಪಳಿಸಿ



ಮೆಲ್ಲಮೆಲ್ಲನೆ



ಹಾಡಿ ಹಾಡಿ

5. ಯೋಚಿಸಿ ಉತ್ತರಿಸಿ.





ಅಮ್ಮ! ಕ್ಯಾರೆಟ್ ಬಹಳ ಸಿಹಿಯಾಗಿದೆ.

ಹೌದಾ! ವಿನೋದ್.



ಅಮ್ಮ, ಕ್ಯಾರೆಟ್ ತೆಗೆದುಕೊಂಡು ಬಂದ ಸ್ಥಳ ಯಾವುದು?



ಮಾರುಕಟ್ಟೆ ☐



ತರಕಾರಿ ಅಂಗಡಿ ☐



ತೋಟ ☐

6. ಅನುಸರಿಸಿ ಬರೆಯಿರಿ.

ಬಾಲಕನ ದಿನಚರಿ...	ನನ್ನ ದಿನಚರಿ...
ಪಾಠ ಓದುವೆನು.	_____
ಆಟ ಆಡುವೆನು.	_____
ಮಾಡಿ ಕಲಿಯುವೆನು.	_____



7. ಇಷ್ಟವಾದ ಚಟುವಟಿಕೆ ಯಾವುದು? ✓ ಹಾಕಿ ಮಾತನಾಡು.



☐



ಓದಲು ತೆಗೆದುಕೊಂಡ ಸಮಯ

1. ___:___ 2. ___:___ 3. ___:___

☐



☐

1. ಪದ್ಯದಲ್ಲಿ ಇಷ್ಟವಾದ ಪದಗಳನ್ನು ಬರೆಯಿರಿ.



1		6	
2		7	
3		8	
4		9	
5		10	



ತಾವು ಬರೆದಿರುವ ಅದೇ ಪದಗಳನ್ನು ಅಧಿಕವಾಗಿ ಬರೆದಿರುವವರು ಯಾರು? ಎಂಬುದನ್ನು ಗುಂಪಿನವರೊಂದಿಗೆ ಹೋಲಿಸಿ ನೋಡಬೇಕು.

☐

ಕಲಿಕಾ ಪಯಣ



ರಚಿಸುವ ಸಮಯ

ಮಿನುಗುವ ತಾರೆಗಳು ಹಾಡಿಗೆ
ಒಂದೊಂದು ಗುಂಪಿನವರು ಒಂದೊಂದು
ರಾಗ ಸಂಯೋಜಿಸಿ ಹಾಡುವುದು.





ನಾನು ಕಲಿತದ್ದು



1	ಇಷ್ಟವಾದ ರಾಗದಲ್ಲಿ ಹಾಡನ್ನು ಹಾಡುವುದು ಗೊತ್ತು.	☐	☆ ☆ ☆
2	ಯೋಚಿಸಿ ಉತ್ತರಿಸಬಹುದು.	☐	☆ ☆ ☆
3	ಓದಿದ್ದನ್ನು ಅರ್ಥ ಮಾಡಿಕೊಂಡು ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗುತ್ತದೆ.	☐	☆ ☆ ☆

ಕಲಿತ ಸಾಮರ್ಥ್ಯಕ್ಕೆ ✓ ಗುರುತು ಹಾಕಬೇಕು. ಗಳಿಸಿದ ಸಾಮರ್ಥ್ಯಕ್ಕೆ ತಕ್ಕಂತೆ ಬಣ್ಣ ಹಚ್ಚಬೇಕು.

ಹಿಂದಿರುಗಿ ನೋಡೋಣ



ಮುಂದೆ ಏನಾಗಿರಬಹುದು?



ಅಮ್ಮನೇ ಮಗುವನ್ನು ಹಿಡಿದುಕೊಳ್ಳಬಹುದಿತ್ತು.

ಮಗು ಆಟಿಕೆ ಹಿಡಿದು ನಿಲ್ಲಬಹುದಿತ್ತು.

ಮಗು ಗೋಡೆ ಹಿಡಿದು ನಿಲ್ಲಬಹುದಿತ್ತು.



ನಾವು ಹಲವು ತೀರ್ಮಾನಗಳನ್ನು ಹೇಳಬಹುದು.

ನಿಮ್ಮ ಅನಿಸಿಕೆಗಳನ್ನು ಹೇಳಿರಿ.





ಪದಗಳನ್ನು ಕಂಡು ಹಿಡಿಯಿರಿ.

- ಇದು ಐದು ಅಕ್ಷರದ ಪದ
- ಕೊನೆಯ ಎರಡು ಅಕ್ಷರ ಕಾಯಿ
- ಇದು ಒಂದು ತರಕಾರಿ

ಹಾಗಲಕಾಯಿ



ನಾವು ಕಂಡು ಹಿಡಿದೆವು.

ನೀವು ಕಂಡು ಹಿಡಿಯಿರಿ.



- ಇದು ನಾಲ್ಕು ಅಕ್ಷರದ ಪದ.
- ಕೊನೆಯ ಎರಡು ಅಕ್ಷರ ಬಾಣ.
- ಯುದ್ಧ ಮಾಡುವಾಗ ಬಳಸುವರು

ಸರಿಯಾದ ಅಕ್ಷರವನ್ನು ಆರಿಸಿ ಬರೆಯಿರಿ.

ಕ ಅ ಣ ಒ

ವ್ಯಂಜನ ಅಕ್ಷರವನ್ನು ಬರೆಯಿರಿ.

ಔತ__

ನಾವು ಬರೆದೆವು



ನೀವು ಬರೆಯಿರಿ



ಆ ನ ಅ ಮ

ದೀರ್ಘ ಸ್ವರಾಕ್ಷರವನ್ನು ಬರೆಯಿರಿ.

_____ ಭರಣ

ಚಿತ್ರಕ್ಕೆ ಸೂಕ್ತವಾದ ವಾಕ್ಯಗಳನ್ನು ಕಂಡು ಹಿಡಿದು ✓ ಗುರುತು ಹಾಕಿರಿ.



ಹುಡುಗಿ

- ಆಟವಾಡುತ್ತಿದ್ದಾಳೆ. ☐
- ಉಯ್ಯಾಲೆಯಲ್ಲಿ ಆಡುತ್ತಿದ್ದಾಳೆ. ☑
- ಬರೆಯುತ್ತಿದ್ದಾಳೆ. ☐
- ಮರದ ಕೆಳಗೆ ಇದ್ದಾಳೆ. ☑



ನಾವು ಕಂಡು ಹಿಡಿದೆವು.

ನೀವು ಕಂಡು ಹಿಡಿಯಿರಿ.



ಅಳಿಲು

- ಓಡುತ್ತಿದೆ. ☐
- ಕೊಂಬೆಯಲ್ಲಿ ಕುಳಿತಿದೆ. ☐
- ಹಣ್ಣನ್ನು ತಿನ್ನುತ್ತಿದೆ. ☐
- ನೆಲದ ಮೇಲೆ ಕುಳಿತಿದೆ. ☐



ನಾನು ಓದುವೆನು; ಬಣ್ಣ ಹಚ್ಚುವೆನು






ವ ರ ಕ ಣ ಚ ಪ

ಅ ಸ ಡ ನ ಮ ತ

ಳ ಹ ಬ ಟ ಜ ಓ



ಕರಗ	ನಮನ	ಚರಕ	ತಗಡು
ಬಳಪ	ಅಡವಿ	ಜನನ	ಪಗಡೆ
ನಟನೆ	ಟಗರು	ಡಮರು	ಮರಳು
ರಚನೆ	ಹಣತೆ	ಸಡಗರ	ವರನಟ



ಬುಗುರಿ
ಬಣ್ಣದ ಬುಗುರಿ
ನನ್ನ ಬಣ್ಣದ ಬುಗುರಿ

ಬೆಟ್ಟ
ದೊಡ್ಡಬೆಟ್ಟ
ನೀಲಗಿರಿಯ ದೊಡ್ಡ ಬೆಟ್ಟ

ಗಿಡಗಳ ಚಂದ
ಹೂಗಳ ಅಂದ
ನೋಡಲು ಚಂದ
ಸವಿ ಮಕರಂದ



ರೈತ ಹಿಡಿದ ನೇಗಿಲ
ಉತ್ತನು ತನ್ನ ಹೊಲ
ದೊರಕಿತು ಅವನಿಗೆ ಫಲ
ನೀಡಿದ ಅನ್ನದಾತ ಬಲ











ನಾನು ಓದುವೆನು; ಬಣ್ಣ ಹಚ್ಚುವೆನು





ಜಾ ಮಾ ತಾ ರಾ ಕಾ ಲಾ


ರಾ ದಾ ವಾ ನಾ ಚಾ ಯಾ

ತಾ ಸಾ ನಾ ಗಾ ನಾ ಬಾ



ಜಾಣ	ತಾಳ	ಬಾಲ	ಲಾಡು
ದಾಸ	ಮಾನವ	ರಾಘವ	ಪಾತಾಳ
ಕಾಲ್ಗೆಜ್ಜೆ	ಸಾರಂಗ	ವಾಹನ	ಚಾಮರ
ಗಾಳಿಪಟ	ಚಾರುಲತಾ	ನಾದ	ಯಾಂತ್ರಿಕ

ಹಣ್ಣು
ಮಾವಿನ ಹಣ್ಣು
ಮಾಗಿದ ಮಾವಿನ ಹಣ್ಣು




ಬರೆಯೋಣ
ಚಿತ್ರ ಬರೆಯೋಣ
ನಮ್ಮ ಶಾಲೆಯ ಚಿತ್ರ ಬರೆಯೋಣ

ಮಾಮಾ ಮಾಮಾ ಚಂದಮಾಮ.
ಮಾಲೆ ಮಾಲೆ ಹೂ ಮಾಲೆ.
ನಗು ನಗು ಮುಗುಳು ನಗು.
ಬೆಲ್ಲ ಬೆಲ್ಲ ಸವಿ ಬೆಲ್ಲ.



ಆಡಿ ಹಾಡಿ ನಲಿಯೋಣ.
ಕೂಡಿ ಕೂಡಿ ಬಾಳೋಣ.
ಒಂದುಗೂಡಿ ದುಡಿಯೋಣ.
ಎಲ್ಲರೂ ಹಂಚಿ ತಿನ್ನೋಣ.





ನಾನೇ ಮಾಡುವೆನು



1. ಕೇಳಿ ಉತ್ತರ ಹೇಳಿರಿ.

ಒಂದು ಅಡವಿಯಲ್ಲಿ ನದಿಯೊಂದು ಹರಿಯುತ್ತಿತ್ತು ಹಾಗೂ ಆ ನದಿಯ ದಡದಲ್ಲಿ ಒಂದು ಮರವಿತ್ತು. ಆ ಮರದ ಮೇಲೆ ಒಂದು ಪಾರಿವಾಳವು ಕುಳಿತಿತ್ತು. ಆ ಪಾರಿವಾಳವು ನದಿಯಲ್ಲಿ ಮುಳುಗುತ್ತಾ ಇದ್ದ ಇರುವೆಯನ್ನು ನೋಡಿತು. ಆ ಇರುವೆಯನ್ನು ಬದುಕಿಸಲೆಂದು ಪಾರಿವಾಳ ಒಂದು ಎಲೆಯನ್ನು ನದಿಗೆ ಎಸೆಯಿತು. ಇರುವೆಯು ಎಲೆಯ ಮೇಲೆ ಕುಳಿತು ದಡ ಸೇರಿತು. ಇರುವೆಯು ಪಾರಿವಾಳದ ಉಪಕಾರವನ್ನು ಸ್ಮರಿಸಿತು. ಒಬ್ಬ ಬೇಟೆಗಾರನು ಪಾರಿವಾಳವನ್ನು ಕೊಲ್ಲಲು ತನ್ನ ಬಾಣದಿಂದ ಗುರಿ ಇಟ್ಟನು. ಇದನ್ನು ನೋಡಿದ ಇರುವೆಯು ಬೇಟೆಗಾರನ ಕಾಲನ್ನು ಕಚ್ಚಿತು. ಬೇಟೆಗಾರನು ಇಟ್ಟ ಬಾಣದ ಗುರಿ ತಪ್ಪಿತು. ಪಾರಿವಾಳವು ಬದುಕಿತು. ಈ ರೀತಿ ಇರುವೆಯು ಪಾರಿವಾಳಕ್ಕೆ ಸಹಾಯ ಮಾಡಿತು.





ನದಿಯಲ್ಲಿ ತೇಲುತ್ತಿದ್ದ ಇರುವೆಗೆ ಯಾರು, ಯಾವ ರೀತಿ ಸಹಾಯ ಮಾಡಿದರು?

2. ಓದಿ ತೋರಿಸಿ.

ಆಗಸ
ಇಣುಕು
ರಭಸ
ಸರಸರ
ತಿಂಗಳು

ಮುಗಿಲು
ಹಗಲು
ಬಗ್ಗಿ ನೋಡು
ಪ್ರತಿರೂಪ
ಸೌತೆಕಾಯಿ

ಗೋಲಕ
ನಿರ್ಗಮನ
ತೇಲುವುದು
ಅನುಕೂಲ
ಬರೆದಳು

ದೀಪಾವಳಿ
ಜಲಪಾತ
ಹಾಕಿ
ಉದ್ಯಾನವನ
ಹುಡುಕಾಟ

ಆಭರಣ
ಗುಡುಗು
ತೆಂಗಿನಮರ
ಕಾಫಿತೋಟ
ಕರಡಿಗೊಂಬೆ

ನೀವು ನಿರಂತರವಾಗಿ ಎಷ್ಟು ಪದಗಳನ್ನು ಓದಬಹುದು ಎಂದು ನಿಮ್ಮ ಗೆಳೆಯರೊಂದಿಗೆ ಸ್ಪರ್ಧಿಸಿ.

3. ಓದಿ ಉತ್ತರಿಸಿ.

1. ದೀರ್ಘಸ್ವರಾಕ್ಷರಗಳಿಂದ ಪ್ರಾರಂಭವಾಗುವ ಪದಗಳನ್ನು ಬರೆಯಿರಿ.

ಅಳಿಲು
ಊರುಗೋಲು

_____

_____

ಈಶ್ವರ
ಇರುವೆ

2. ಮೂರು ವಾಕ್ಯಗಳಿಗೂ ಸರಿಹೊಂದುವ ಚಿತ್ರ ಯಾವುದು?

- ಹೊಲದಲ್ಲಿ ಗಿಡ
- ಗಿಡದಲ್ಲಿ ಹೂವು
- ಹೂವಿನ ಮೇಲೆ ಜೇನುಹುಳ


☐

☐

☐

3. **ಉತ್ತರ ಬರೆಯಿರಿ.**

ತೋಳಕ್ಕೆ ಹೆದರಿದ ಮೊಲ ತೋಟದೊಳಗೆ ಓಡಿತು.



ಅ) ತೋಟದೊಳಗೆ ಹೆದರಿ ಓಡಿದ ಪ್ರಾಣಿ ಯಾವುದು? _____

ಆ) ಮೊಲ ಯಾವುದನ್ನು ನೋಡಿ ಹೆದರಿತು? _____

4. ಮುಂದೆ ಬರುವ ವಾಕ್ಯ ಯಾವುದು? ಆರಿಸಿ ಬರೆಯಿರಿ.

ಹಾಲಿನಿಂದ ಮೊಸರು
ಮೊಸರಿನಿಂದ ಮಜ್ಜಿಗೆ
ಮಜ್ಜಿಗೆಯಿಂದ ಬೆಣ್ಣೆ

_____

ಅ) ಹಾಲಿನಿಂದ ಮೊಸರು,
ಆ) ಬೆಣ್ಣೆಯಿಂದ ತುಪ್ಪ
ಇ) ಮಜ್ಜಿಗೆಯಿಂದ ಬೆಣ್ಣೆ

5. ಮುಂದೆ ಏನು ಮಾಡಬೇಕು?



- ಉರುಳಿಸಿ ಬಿಡೋಣ. ☐
- ಹಾರಿ ಬಿಡೋಣ. ☐
- ಗಾಳಿಯಲ್ಲಿ ಹಿಡಿಯೋಣ. ☐

ಘಟಕ 2

4. ಕಾಗೆ ಮತ್ತು ಗುಬ್ಬಚ್ಚಿಯ ಕಥೆ

ಒಂದು ಊರಿನಲ್ಲಿ ಗುಬ್ಬಚ್ಚಿಯೊಂದು ಸುಂದರವಾದ ಗೂಡನ್ನು ಕಟ್ಟಿಕೊಂಡು ವಾಸಿಸುತ್ತಿತ್ತು. ಬೆಳಿಗ್ಗೆ ಎದ್ದು ಆಹಾರ ಹುಡುಕಲು ದೂರ ಹೋಗುತ್ತಿತ್ತು. ಆಹಾರ ತಿಂದು ಹಿಂದಿರುಗುತ್ತಿತ್ತು.





ನೀತಿ : ಎಲ್ಲರಿಗೂ ಸಹಾಯ ಮಾಡುವ ಗುಣವನ್ನು ಹೊಂದಿರಬೇಕು.



ಓಹೋ! ಗಾಳಿ ಜೋರಾಗಿ ಬೀಸುತ್ತಿದೆ.



ಒಂದು ದಿನ ಜೋರಾಗಿ ಬಿರುಗಾಳಿ ಬೀಸತೊಡಗಿತು. ಅದೇ ಊರಿನಲ್ಲಿ ಕಾಗೆಯೊಂದು ಗೂಡನ್ನು ಕಟ್ಟಿಕೊಂಡು ವಾಸಿಸುತ್ತಿತ್ತು. ಅದರ ಗೂಡು ಬಿರುಗಾಳಿಗೆ ಮುರಿದು ಬಿದ್ದಿತು.



ಆಗ ಕಾಗೆಯ ಕಣ್ಣಿಗೆ ಕಂಡಿದ್ದು ಸುಂದರವಾದ ಗುಬ್ಬಚ್ಚಿಯ ಗೂಡು. ಅದು ತಾನು ಈ ಗೂಡಿನಲ್ಲಿ ಉಳಿದುಕೊಳ್ಳಲು ಸಹಾಯವನ್ನು ಬೇಡಿತು.



ಗುಬ್ಬಚ್ಚಿಯು ಕಾಗೆಗೆ ಗೂಡುಕಟ್ಟುವ ತನಕ ಇಲ್ಲೇ ಇರುವಂತೆ ಹೇಳಿತು. ಹಾಗಾಗಿ ಕಾಗೆಗೆ ತುಂಬಾ ಸಂತೋಷವಾಯಿತು.





ಸ್ವಲ್ಪ ದಿನಗಳು ಕಳೆದ ನಂತರ ಕಾಗೆಯು ಗುಬ್ಬಚ್ಚಿಯ ಗೂಡನ್ನು ಹಾಳು ಮಾಡುವ ಯೋಜನೆಯನ್ನು ಮಾಡಿತು. ಜೊತೆಗೆ ಇತರ ಸ್ನೇಹಿತರನ್ನು ಕರೆದುಕೊಂಡು ಗುಬ್ಬಚ್ಚಿಯ ಗೂಡನ್ನು ಹಾಳು ಮಾಡಿತು.

ಇದನ್ನೆಲ್ಲ ನೋಡಿದ ಗುಬ್ಬಚ್ಚಿಗೆ ತುಂಬಾ ಬೇಸರವಾಗಿ ಅಳತೊಡಗಿತು.





ಸಹಾಯ ಬೇಡಿ ಬಂದಾಗ ಕನಿಕರ ತೋರಿಸಬೇಕು. ಸಹಾಯ ಪಡೆದವರು ಕೃತಜ್ಞತೆಯಿಂದ ಬಾಳಬೇಕು.

ಗುಬ್ಬಚ್ಚಿಗೂ ಕಾಗೆಗೂ ಸಂವಾದ ನಡೆಯಿತು. 'ನೀನು ಸಹಾಯ ಬೇಡಿಕೊಂಡು ಬಂದೆ, ಈಗ ನನ್ನ ಗೂಡನ್ನೆಲ್ಲಾ ನಾಶ ಮಾಡುತ್ತಿರುವೆ ಇದು ಸರಿಯೇ'? ಎಂದು ಗುಬ್ಬಚ್ಚಿ ಕೇಳಿತು. ಅದಕ್ಕೆ ಕಾಗೆ 'ಈಗ ನಾನು ಕಷ್ಟದಲ್ಲಿಲ್ಲವಲ್ಲ!' ಎಂದು ಹೇಳಿ ಗುಬ್ಬಚ್ಚಿಯನ್ನು ಗೂಡಿನಿಂದ ಹೊರದೂಡಿತು.





ಸಹಾಯ ಮಾಡುವ ಮೊದಲು ಯೋಚಿಸಬೇಕು. ಅಹಂಕಾರ, ಜಂಬ ಇತರ ಗುಣವಿರುವವರಿಂದ ದೂರ ಇರಬೇಕು.



ಗುಬ್ಬಚ್ಚಿಯು ತನಗೆ ನಡೆದ ಸಂಗತಿಯನ್ನು ತನ್ನ ಗೆಳೆಯನಾದ ಗೂಬೆಗೆ ಹೇಳಿತು. ಗೂಬೆ 'ನೀನು ಸಹಾಯ ಮಾಡಿರುವುದು ಸಂತೋಷದ ವಿಷಯ. ಆದರೆ ನಿನ್ನಿಂದ ಸಹಾಯ ಪಡೆದು ನಿನಗೆ ಮೋಸ ಮಾಡಿರುವ ಕಾಗೆಯನ್ನು ಧೈರ್ಯದಿಂದ ಹೊರದೂಡಬೇಕು. ಧೈರ್ಯ, ಶೌರ್ಯ ಇವುಗಳು ನಮ್ಮಲ್ಲಿ ಅಡಗಿರುವ ಗುಣಗಳು ನಮಗೆ ಅನ್ಯಾಯವಾಗುತ್ತದೆ ಎಂದರೆ ಅದನ್ನು ಸಂದರ್ಭಕ್ಕನುಗುಣವಾಗಿ ಬಳಸಬೇಕು' ಎಂದಿತು.



ಒಳ್ಳೆಯ ಸ್ನೇಹಿತರನ್ನು ಪಡೆಯುವುದು ಒಂದು ಜಾಣ್ಮೆ. ನಾವು ಅವರಿಗೆ ಸಹಾಯ ಮಾಡಿದರೆ ನಮಗೆ ಒಂದಲ್ಲ ಒಂದು ರೂಪದಲ್ಲಿ ಸಹಾಯ ಮಾಡುವರು.

ಸಹಾಯ ಮಾಡಲು ಹೋಗಿ ಕಷ್ಟಕ್ಕೆ ಸಿಲುಕಿದ ಗುಬ್ಬಚ್ಚಿ. ಗೂಬೆಯ ಮಾತನ್ನು ಕೇಳಿ ಕಾಗೆಯ ಮೇಲೆ ಸೇಡು ತೀರಿಸಿಕೊಳ್ಳಲು ಯೋಚಿಸಿತು. ನಾನು ಆಕಾರದಲ್ಲಿ ಸಣ್ಣ ಪಕ್ಷಿ. ಆದರೂ ನನಗೆ ಬುದ್ಧಿಶಕ್ತಿ ಹೆಚ್ಚು ಕಾಗೆಯನ್ನು ಗೂಡಿನಿಂದ ಹೊರದೂಡಲು "ಶಕ್ತಿಗಿಂತ ಯುಕ್ತಿ ಮೇಲು" ಎಂಬ ನಿರ್ಧಾರ ಮಾಡಿತು. ಗುಬ್ಬಚ್ಚಿ ಹಲವು ಬಾರಿ ಯೋಚಿಸಿ ಒಂದು ಉಪಾಯವನ್ನು ಮಾಡಿತು ಕಾಗೆಯನ್ನು ಸುಲಭವಾಗಿ ಗೂಡಿನಿಂದ ಓಡಿಸಲು ಜೇನುನೊಣಗಳ ಸಹಾಯ ಕೇಳಿತು.





ಗುಬ್ಬಚ್ಚಿ ಹಾಗೂ ಎಲ್ಲಾ ಜೇನು ನೊಣಗಳು ಕಾಗೆಯನ್ನು ಮುತ್ತಿದವು. ಆಗ ಕಾಗೆಗೆ ತನ್ನ ತಪ್ಪಿನ ಅರಿವಾಗಿ ಗೂಡಿನಿಂದ ಹೊರಗೆ ಓಡಿ ಹೋಯಿತು. ಗುಬ್ಬಚ್ಚಿ ಜೇನು ನೊಣಗಳಿಗೆ ಧನ್ಯವಾದ ಹೇಳಿತು.



ಗುಬ್ಬಚ್ಚಿಯು ಒಗ್ಗಟ್ಟಿನಲ್ಲಿ ಬಲವಿದೆ ಎಂಬುದನ್ನು ನಿರೂಪಿಸಿತು. ಹಾಗೂ"ಉಪಾಯ ಬಲ್ಲವನಿಗೆ ಅಪಾಯವಿಲ್ಲ" ಎಂಬುದನ್ನು ತಿಳಿಯಿತು.

ಗುಬ್ಬಚ್ಚಿಯು ತನ್ನ ಗೂಡಿನಲ್ಲಿ ಮೊದಲಿನಂತೆ ಆಹಾರವನ್ನು ತಿಂದುಕೊಂಡು ಸಂತೋಷದಿಂದ ಉತ್ತಮ ರೀತಿಯಲ್ಲಿ ವಾಸಿಸುವುದನ್ನು ಬದುಕಿತು.





ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ?



1. ಸುಂದರ ಗೂಡನ್ನು ಕಟ್ಟಿಕೊಂಡು ವಾಸಿಸುತ್ತಿದ್ದ ಪಕ್ಷಿ ಯಾವುದು?

_____

2. ಗುಬ್ಬಚ್ಚಿಯು ಏನನ್ನು ಹುಡುಕಿಕೊಂಡು ಹೊರಗೆ ಹೋಯಿತು?

_____

3. ಬಿರುಗಾಳಿಗೆ ಯಾವ ಪಕ್ಷಿಯ ಗೂಡು ನಾಶವಾಯಿತು?

_____

4. ಗುಬ್ಬಚ್ಚಿಯು ಕಾಗೆಯನ್ನು ಓಡಿಸಲು ಯಾರ ಸಹಾಯ ಬೇಡಿತು?

_____

5. ಗುಬ್ಬಚ್ಚಿಗೆ ಧೈರ್ಯ ತುಂಬಿದ ಪಕ್ಷಿ ಯಾವುದು?

_____



ಗೂಡುಗೂಡು
ಗುಬ್ಬಚ್ಚಿ ಗೂಡು



ಗೂಡುಗೂಡು
ಗುಬ್ಬಚ್ಚಿ ಗೂಡು

ಸನ್ನೆ ಆಟ

ಗೂಡುಗೂಡು ಗುಬ್ಬಚ್ಚಿ ಗೂಡು ಎಂದು ಹೇಳುವೆನು.
ಗುಬ್ಬಚ್ಚಿ ಹಾರುವಂತೆ ಮಾಡುವೆನು.

ಮಾಡಿ ನಲಿಯೋಣ

1. ಮುಂದುವರೆದು ಓದಲು



ಪಾಠವನ್ನು ಓದಲು ಕೇಳಲು

ಕಿವಿಯಡಕದಿಂದ ಕೇಳಲು ಮುಂದುವರಿಸಿ ಓದಲು

2. ಕಥೆಯಲ್ಲಿ ಇರುವ ಪದಗಳನ್ನು ಕಂಡು ಹಿಡಿದು ಬರೆಯಿರಿ.



1 _____ 4 _____

2 _____ 5 _____

3 _____ 6 _____



ನೀವು ಬರೆದ ಅದೇ ಪದಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬರೆದವರು ಯಾರು ಎನ್ನುವುದನ್ನು ಗುಂಪಿನವರೊಂದಿಗೆ ಹೋಲಿಸಿ ನೋಡಬೇಕು.

ಒಂದೇ ತರಹ ಅಧಿಕ ಪದಗಳನ್ನು ಬರೆದ ಗೆಳೆಯರು: _____

ಒಂದೇ ತರಹ ಬರೆದ ಪದಗಳ ಸಂಖ್ಯೆ: _____

3. ಪಾಠದಲ್ಲಿ ಪದಗಳಿಗೆ ಅಡಿಗೆರೆ ಹಾಕಿ ಬರೆಯಿರಿ.



1. ಗಾದೆ ಮಾತುಗಳನ್ನು ಬರೆಯಿರಿ:

_____

_____

2. ಈ ಪಾಠದಲ್ಲಿ ನಿಮಗೆ ಇಷ್ಟವಾದ ವಾಕ್ಯವನ್ನು ಬರೆಯಿರಿ:

_____

1. ಗೂಡುಕಟ್ಟುವ ತನಕ ಇಲ್ಲೇ ಇರು ಎಂದು ಹೇಳಿದ ಪಕ್ಷಿ ಯಾವುದು?

ಗುಬ್ಬಚ್ಚಿ ☐ ಕಾಗೆ ☐ ಹೊಸಗೂಡು ☐

2. ಕಾಗೆ ಗುಬ್ಬಚ್ಚಿ ಗೂಡನ್ನು ನಾಶ ಮಾಡಲು ಕಾರಣವೇನು?

_____

ಪಾಠದಲ್ಲಿ ಸೂಕ್ತವಾದ ಉತ್ತರಗಳನ್ನು ನೀವು ಕಂಡು ಹಿಡಿದು ಅಡಿಗೆರೆ ಹಾಕಬೇಕು.

4. ಮಾತನಾಡೋಣ.

ನನಗೆ ಇಷ್ಟವಾದ
ವಸ್ತುಗಳು...



ಮೊದಲು ಬಳಸುತ್ತಿದ್ದ ಇನ್ನು ಮುಂದೆ ಬಳಸದೇ ಇರುವ ನಿಮಗೆ ಇಷ್ಟವಾದ ವಸ್ತುವಿನೊಂದಿಗೆ ನಿಮ್ಮ ಅನುಭವದ ಬಗ್ಗೆ ಮಾತನಾಡಬೇಕು.

5. ಓದಿ ಉತ್ತರ ಬರೆಯಿರಿ.

ಓದುವ ಹಲಗೆ

ಗೂಡು	ಹುಡುಕು	ಗೂಬೆ	ಕಾಡು
ಮನೆ	ಕಾಗೆ	ರಾತ್ರಿ	ಗಿಳಿ
ಬೆಳಿಗ್ಗೆ	ಧ್ವನಿ	ಗೆಳೆಯ	ಆಹಾರ
ಗುಬ್ಬಚ್ಚಿ	ಮರ	ಜೇನು	ಮನೆ

1. ಇದು ಒಂದು ಪುಟ್ಟ ಪಕ್ಷಿ: _____

2. ರಾತ್ರಿಯಲ್ಲಿ ನಿದ್ರಿಸದ ಪಕ್ಷಿ: _____

3. ಓದುವ ಹಲಗೆಯಲ್ಲಿರುವ ಪಕ್ಷಿಯ ಹೆಸರುಗಳನ್ನು ಬರೆಯಿರಿ: _____,

_____, _____, _____

4. ಜೇನಿನಿಂದ ಏನು ದೊರೆಯುತ್ತದೆ?

_____

6. ಉಕ್ತಲೇಖನ.

ಓದುವ ಹಲಗೆಯಲ್ಲಿರುವ ಪದಗಳನ್ನು ಕೇಳಿ ಬರೆಯಬೇಕು.

ಪದಗಳನ್ನು ವೇಗವಾಗಿ ಓದುವೆನು, ಬಣ್ಣ ಹಚ್ಚುವೆನು.

7. ಪದವನ್ನು ಕಂಡುಹಿಡಿಯಿರಿ.



ಜಲಪಾತದಲ್ಲಿ ಜನರು ಜಳಕ ಮಾಡಿದರು	ಜ	ಬಂದರಿಗೆ ಬಂದ ಹಡಗು	
ಪಟ ಪಟ ಗಾಳಿಪಟ ಗಾಳಿಪಟ		ಮಡಿಕೆಯೊಳಗೆ ಕುಡಿಕೆ	
ಕಾಡಿನಲ್ಲಿ ಕಾಲಿಟ್ಟ ಕಾಗೆ			

ಅಕ್ಷರಗಳನ್ನು ಕ್ರಮಪಡಿಸಿದರೆ ಸಿಗುವ ಪದ _____.

8. ಪದ್ಯವನ್ನು ಪೂರ್ಣಗೊಳಿಸಿರಿ.



ಗಿಳಿ ಗಿಳಿ
ಯಾವ ಗಿಳಿ?

ಹಸಿರು ಗಿಳಿ
ಯಾವ ಹಸಿರು?

ಎಲೆ ಹಸಿರು
ಯಾವ ಎಲೆ?

ಮಾವಿನ ಎಲೆ
ಯಾವ ಮಾವು?

ಹುಳಿಮಾವು
ಯಾವ ಹುಳಿ?

ನಿಂಬೆ ಹುಳಿ
ಯಾವ ನಿಂಬೆ?

ದಾಳಿಂಬೆ.





ಹಸು ಹಸು

_____?

ಬಿಳಿ ಹಸು

ಯಾವ ಬಿಳಿ?

_____

_____?

ಹಸುವಿನ ಹಾಲು

9. ಮಾತನಾಡೋಣ: ಬರೆಯೋಣ.



ಚಿತ್ರವನ್ನು ನೋಡಿ ಮಾತನಾಡಿರಿ, ವಾಕ್ಯವನ್ನು ಬರೆಯಿರಿ.

10. ಯೋಚಿಸಿ ಉತ್ತರಿಸಿರಿ.



ಧನಿಶ್ ಶಾಲೆಗೆ ನಡೆದುಕೊಂಡು ಹೋಗುತ್ತಿದ್ದನು. ಅವನ ಹೊಲದ ಪಕ್ಕದಲ್ಲಿ ಒಂದು ಮಾವಿನ ಮರವಿತ್ತು. ಅದರಲ್ಲಿ ಹೆಚ್ಚು ಮಾವಿನ ಹಣ್ಣುಗಳಿದ್ದವು. ಅವುಗಳನ್ನು ನಾಳೆ ಕೀಳೋಣವೆಂದು ಭಾವಿಸಿದನು.

ಸರಿಯಾದ ಚಿತ್ರಕ್ಕೆ ✓ ಗುರುತು ಮಾಡಿರಿ.



☐



☐



☐



11. ಮಾದರಿಯಂತೆ ಬರೆಯಿರಿ.



ಧನಿಶ್ ಇಷ್ಟಪಟ್ಟು ಮಾಡುವುದು...

- ಸೈಕಲ್ ಓಡಿಸುವೆ.
- ಊರನ್ನು ಸುತ್ತಿ ನೋಡುವೆ.
- ಸ್ನೇಹಿತರ ಜೊತೆಗೆ ಆಟವಾಡುವೆ.


ನಾನು ಇಷ್ಟಪಟ್ಟು ಮಾಡುವುದು...

_____

_____

_____

12. ವಾಕ್ಯ ರಚಿಸಿ ಹೇಳಿರಿ.





ಆನೆ ದೊಡ್ಡದು ಇಲಿ ಚಿಕ್ಕದು.

ವಿರುದ್ಧ ಪದಗಳನ್ನು ತಿಳಿಯೋಣ.

ಸಂತೋಷ	×	ದುಃಖ	ದೊಡ್ಡದು	×	ಚಿಕ್ಕದು	ಲಾಭ	×	ನಷ್ಟ
ನಿಧಾನವಾಗಿ	×	ವೇಗವಾಗಿ	ಮೇಲೆ	×	ಕೆಳಗೆ	ಏರುವುದು	×	ಇಳಿಯುವುದು
ಎತ್ತರ	×	ಗಿಡ್ಡ	ಹೊರಗೆ	×	ಒಳಗೆ	ಹೊಸದು	×	ಹಳೆಯದು

ವಿರುದ್ಧ ಪದವನ್ನು ಭರ್ತಿ ಮಾಡಿರಿ.

1. ಗೂಬೆ ಹೊಸ ಗೂಡನ್ನು ಕಟ್ಟಿತ್ತು. ಹಳೆಯ ಗೂಡು ಬಿದ್ದು ಹೋಯಿತು.

2. ರಾತ್ರಿ ಮಲಗುವೆ, _____ ಏಳುವೆ.

3. ವೇಗವಾಗಿ ಹಾರಿತು ಕಾಗೆ _____ ಹಾರಿತು ಗುಬ್ಬಚ್ಚಿ.

4. ಗೂಡಿಲ್ಲದೆ ಗುಬ್ಬಚ್ಚಿಗೆ ದುಃಖವಾಯಿತು. ಹೊಸಗೂಡನ್ನು ನೋಡಿ _____ ವಾಯಿತು.

ಕಲಿಕಾ ಪಯಣ



1. ಕ್ರಿಯಾಶೀಲ ಸಮಯ.

- ಕಾಗೆ ಗುಬ್ಬಚ್ಚಿಯ ಕಥೆಯನ್ನು ಹೇಳೋಣ.
- ಒಂದು ಮರದ ಚಿತ್ರವನ್ನು ಬರೆದು ಅದು ಮಾತನಾಡುವಂತೆ ಬರೆಯೋಣ.



ನಾನು ಬರೆದಿರುವ ಚಿತ್ರವನ್ನು ಪ್ರದರ್ಶಿಸಲು ಬಯಸುತ್ತೇನೆ.

2. ಇಂದಿನಿಂದ ನಾನು ಊಟ ಮಾಡುವಾಗ

- ಎರಡು ಕೈಗಳನ್ನು ಚೆನ್ನಾಗಿ ತೊಳೆಯುತ್ತೇನೆ. ☐
- ಊಟ ಮಾಡುವಾಗ ಆಹಾರವನ್ನು ವ್ಯರ್ಥ ಮಾಡುವುದಿಲ್ಲ. ☐
- ಪೌಷ್ಟಿಕ ಆಹಾರವನ್ನು ಸೇವಿಸುತ್ತೇನೆ. ☐
- ಊಟ ಮಾಡಿದ ನಂತರ ನೀರನ್ನು ಕುಡಿಯುತ್ತೇನೆ. ☐



ನಾನು ಕಲಿತದ್ದು



1. ಓದಿದ ಕಥೆಯನ್ನು ಹೇಳಲು ಬರುತ್ತದೆ. ☐
2. ವಿರುದ್ಧ ಪದಗಳನ್ನು ಕಂಡು ಹಿಡಿಯುವೆನು. ☐
3. ಚಿತ್ರವನ್ನು ನೋಡಿ ಮಾತನಾಡಲು, ಬರೆಯಲು ಬರುತ್ತದೆ. ☐

ಕಲಿತ ಸಾಮರ್ಥ್ಯಕ್ಕೆ ✓ ಗುರುತು ಹಾಕಬೇಕು. ಗಳಿಸಿದ ಸಾಮರ್ಥ್ಯಕ್ಕೆ ತಕ್ಕಂತೆ ಬಣ್ಣ ಹಚ್ಚಬೇಕು.

5. ನಾಯಿ ಮರಿಯ ಹುಟ್ಟುಹಬ್ಬ...

ಮಕ್ಕಳೇ! ನಾನು ನಿಮಗೊಂದು ಕಥೆಯನ್ನು ಹೇಳುವೆನು. ಅದರ ಜೊತೆಯಲ್ಲಿ ಪರಿಸರವನ್ನು ಕಾಪಾಡುವ ಹಾಗೆ ಅದರ ಕೆಲವೊಂದು ಘೋಷಣೆಗಳನ್ನು ತಿಳಿಸಿ ಕೊಡುವೆನು. ಎಲ್ಲವನ್ನು ಚೆನ್ನಾಗಿ ಗಮನವಿಟ್ಟು ಕೇಳಿಸಿಕೊಳ್ಳಿ. ನಂತರ ನಾನು ನಿಮಗೆ ಒಂದು ಚಟುವಟಿಕೆಯನ್ನು ಕೊಡುವೆನು ಎಂದು ಹೇಳಿ, ಶಿಕ್ಷಕರು ಮಕ್ಕಳಿಗೆ ಕಥೆಯನ್ನು ಹೇಳಲು ಪ್ರಾರಂಭಿಸುವರು.





ಭೂಮಿಯನ್ನು ಉಳಿಸಿ
ಭವಿಷ್ಯವನ್ನು ಕಾಪಾಡಿ

ನಾಯಿಮರಿಯೊಂದು ಆನಂದದಿಂದ ಕುಣಿದಾಡುತ್ತಿತ್ತು. ಕಾರಣ ಮರುದಿನ ಅದರ ಹುಟ್ಟುಹಬ್ಬ. ಹೀಗೆ ಆನಂದದಿಂದ ನಲಿಯುತ್ತಿದ್ದ ನಾಯಿಮರಿಯನ್ನು ನೋಡಿದ ಅದರ ಸ್ನೇಹಿತರಾದ ಬೆಕ್ಕು ಮತ್ತು ಮೊಲ ತಮ್ಮ ಸ್ನೇಹಿತನ ಹುಟ್ಟುಹಬ್ಬವನ್ನು ಕಾಡಿನಲ್ಲಿ ಆಚರಿಸಲು ಯೋಜನೆಯನ್ನು ರೂಪಿಸಿದರು.

ಕಾಡನ್ನು ಉಳಿಸಿ
ನಾಡನ್ನು ಬೆಳೆಸಿ



ಮರುದಿನ ಬೆಕ್ಕು ಮತ್ತು ಮೊಲ ತಮ್ಮ ಸ್ನೇಹಿತನಿಗೆ ಉಡುಗೊರೆ ತೆಗೆದುಕೊಂಡವು. ಮಳೆಗಾಲವಾದುದರಿಂದ ಎರಡು ಛತ್ರಿಗಳನ್ನು ಕೂಡ ತೆಗೆದುಕೊಂಡವು.



ಅಳಿದರೆ ಕಾಡು ಅಳುವುದು ನಾಡು

ನಂತರ ಮೂವರೂ ಸೇರಿ ಕಾಡಿನತ್ತ ಹೋಗುವಾಗ ದಾರಿಯಲ್ಲಿ ಒಂದು ಸಣ್ಣ ತೊರೆಯನ್ನು ದಾಟಿಕೊಂಡು ಕಾಡನ್ನು ಪ್ರವೇಶಿಸಿದರು.

ಮನೆಗೊಂದು ಮರ ಊರಿಗೊಂದು ವನ

ಅಲ್ಲಿ ಎಲ್ಲರೂ ಸೇರಿ ಹಾಡುತ್ತಾ ನಲಿಯುತ್ತಾ ಹುಟ್ಟುಹಬ್ಬವನ್ನು ಆಚರಿಸಿದರು. ನಂತರ ನಾಯಿಮರಿಗೆ ತಾವು ತಂದಿದ್ದ ಉಡುಗೊರೆಗಳನ್ನು ನೀಡಿದಾಗ ಅದು ತುಂಬಾ ಸಂತೋಷದಿಂದ ಕುಣಿದಾಡಿತು.





ವನ್ಯಜೀವಿಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ

ಕಾರ್ಯಕ್ರಮ ಮುಗಿಸಿ ಹಿಂತಿರುಗಿ ಮನೆಗೆ ಹೊರಡುವಾಗ ಇದ್ದಕ್ಕಿದ್ದಂತೆ ಮಳೆ ಪ್ರಾರಂಭವಾಯಿತು. ಛತ್ರಿಗಳನ್ನು ಹಿಡಿದು ಎಲ್ಲರೂ ಮನೆಗೆ ಬೇಗನೆ ಓಡಲು ಪ್ರಾರಂಭಿಸಿದರು.

ಪ್ಲಾಸ್ಟಿಕ್ ಮುಕ್ತ ನಾಡನ್ನು ಬೆಳೆಸೋಣ




ದಾರಿಯಲ್ಲಿ ಅವುಗಳಿಗೆ ಅಪಾಯ ಕಾದಿತ್ತು. ಕಾಡಿನತ್ತ ಹೋಗುವಾಗ ನೀರು ಕಡಿಮೆ ಇದ್ದ ತೊರೆಯಲ್ಲಿ ನೀರಿನ ಮಟ್ಟ ಏರಿತ್ತು. ಎಲ್ಲರೂ ಗಾಬರಿಗೊಳಗಾದರು. ನಾಯಿಮರಿಗೆ ಮಾತ್ರ ಈಜಲು ಬರುತ್ತಿದ್ದುದರಿಂದ ಅದಕ್ಕೆ ಒಂದು ಉಪಾಯ ಹೊಳೆಯಿತು.

ಅಳಿದರೆ ಕಾಡು ಅಳುವುದು ನಾಡು

ಸ್ನೇಹಿತರೊಂದಿಗೆ ಸೇರಿ ಅಲ್ಲಿದ್ದ ಬಳ್ಳಿಗಳನ್ನು ಸೇರಿಸಿ ಹಗ್ಗ ತಯಾರಿಸಿ ಒಂದು ತುದಿಯನ್ನು ಮರಕ್ಕೆ ಕಟ್ಟಿ ಮತ್ತೊಂದು ತುದಿಯನ್ನು ಹಿಡಿದು ತೊರೆಯ ಮತ್ತೊಂದು ದಡಕ್ಕೆ ಈಜುತ್ತಾ ಹೋಗಿ ಅಲ್ಲಿನ ಒಂದು ಮರಕ್ಕೆ ಕಟ್ಟಿತು.



ಹಸಿರೆ ಉಸಿರು



ನಾಯಿ ಮರಿಯು ಹಿಂತಿರುಗಿ ಬಂದು ಒಂದು ಛತ್ರಿಯನ್ನು ತೆರೆದು ತಲೆ ಕೆಳಗು ಮಾಡಿ ಬಳ್ಳಿಯ ಹಗ್ಗಕ್ಕೆ ಹಿಡಿಯನ್ನು ನೇತುಹಾಕಿ ಬೆಕ್ಕು ಮತ್ತು ಮೊಲವನ್ನು ಒಳಗೆ ಕುಳ್ಳಿರಿಸಿ ಮೇಲೊಂದು ಛತ್ರಿಯನ್ನು ಹಿಡಿದು ದಡದ ಇನ್ನೊಂದು ತುದಿಗೆ ತಳ್ಳಿಕೊಂಡು ಹೋಯಿತು. ಹಾಗೆ ಎಲ್ಲಾ ಪ್ರಾಣಿಗಳು ಅಪಾಯವಿಲ್ಲದೆ ದಡ ಸೇರಿದ ನಂತರ ಸಂತೋಷದಿಂದ ಕುಣಿದಾಡುತ್ತಾ ಮನೆಗೆ ಮರಳಿದವು.

ಈ ರೀತಿಯಾಗಿ ಶಿಕ್ಷಕರು ಮಕ್ಕಳಿಗೆ ನಾಯಿಮರಿಯ ಹುಟ್ಟು ಹಬ್ಬದ ಕಥೆಯನ್ನು ಜೊತೆಗೆ ಕಾಡಿಗೆ ಸಂಬಂಧಿಸಿದ ಘೋಷಣೆಗಳನ್ನು ತಿಳಿಸಿಕೊಡುವುದು.

ಅಭ್ಯಾಸ ಮಾಡೋಣ

1. ಮಾದರಿಯಂತೆ ಓದಿರಿ.



ಪಾಠವನ್ನು ಓದುವುದನ್ನು ಕೇಳಿಯೂ

ಧ್ವನಿ ಸುರುಳಿಯಲ್ಲಿ ಕೇಳಿಯೂ ಮಾದರಿಯಂತೆ ಓದಬಹುದು.

2. ಕಥೆಯಲ್ಲಿ ಇಷ್ಟವಾದ ಪದಗಳನ್ನು ಬರೆಯಿರಿ.



1 _____ 6 _____

2 _____ 7 _____

3 _____ 8 _____

4 _____ 9 _____

5 _____ 10 _____



ತಾವು ಬರೆದ ಅದೇ ಪದಗಳನ್ನು ಅಧಿಕ ಸಂಖ್ಯೆಯಲ್ಲಿ ಬರೆದಿರುವರು ಯಾರು ಎಂಬುದನ್ನು ಗುಂಪಿನವರೊಂದಿಗೆ ಹೋಲಿಸಿ ನೋಡುವುದು.

ಅಧಿಕ ಪದಗಳನ್ನು ಒಂದೇ ರೀತಿ ಬರೆದ ಗೆಳೆಯರು :

ಒಂದೇ ರೀತಿ ಬರೆದ ಪದಗಳ ಸಂಖ್ಯೆ :



3. ಪಾಠದಲ್ಲಿ ಗೆರೆ ಹಾಕಿ ಬರೆಯಿರಿ.

1. 'ವನ' ಪದದ ಸಮನಾರ್ಥಕ ಪದ : _____

2. ನಿಮಗೆ ನಗುವನ್ನು ತರಿಸಿದ ವಾಕ್ಯ :

_____


3. ಘೋಷಣೆಗಳು ಯಾವ ವಿಷಯಕ್ಕೆ ಸಂಬಂಧಿಸಿವೆ? : _____


ಸೂಕ್ತ ಉತ್ತರಗಳನ್ನು ಪಾಠದಲ್ಲಿ ಕಂಡು ಹಿಡಿದು ಗೆರೆ ಹಾಕಬೇಕು.

4. ಆಯ್ಕೆ ಮಾಡಿ ಬರೆಯಿರಿ.



ಕಾಡನ್ನು ಉಳಿಸಿ ನಾಡನ್ನು ಬೆಳೆಸಿ
ಹಸಿರೇ ಉಸಿರು
ವನ್ಯಜೀವಿಗಳನ್ನು ಸಂರಕ್ಷಿಸಿ
ಶಬ್ದ ಮಾಡಬೇಡಿ
ರಸ್ತೆಯ ನಿಯಮಗಳನ್ನು ಪಾಲಿಸಿ
ಮನೆಗೊಂದು ಮರ ಊರಿಗೊಂದು ವನ
ನಿಧಾನವಾಗಿ ಚಲಿಸಿ





5. ಓದಿ ಉತ್ತರ ಬರೆಯಿರಿ.



ಓದುವ ಹಲಗೆ

ಕಾಡು	ಪ್ರಾಣಿಗಳು	ಹುಟ್ಟುಹಬ್ಬ	ವೇಗ
ಸ್ಥಳ	ದಾರಿಯಲ್ಲಿ	ಆಚರಿಸಿದವು	ರಕ್ಷಣೆ
ನಿಧಾನವಾಗಿ	ಸಂತಸ	ಸ್ನೇಹಿತರು	ಪರಿಸರ
ಕಡಿಯಬಾರದು	ತೊರೆ	ಅಪಾಯ	ಮರಗಳು

1. ಸ್ವರಾಕ್ಷರದಿಂದ ಪ್ರಾರಂಭವಾಗುವ ಪದಗಳು: _____, _____

2. ಪದಗಳನ್ನು ಬಳಸಿ ಘೋಷಣೆಯನ್ನು ಬರೆಯಿರಿ.

_____

ಪದಗಳನ್ನು ವೇಗವಾಗಿ ಓದುವೆನು, ಬಣ್ಣ ಹಚ್ಚುವೆನು.



6. ಮುಂದುವರೆದು ಬರೆಯಿರಿ.

ಲಡ್ಡು ಲಡ್ಡು ತಟ್ಟೆ ತುಂಬಾ ಲಡ್ಡು

ಹಣ್ಣು ಹಣ್ಣು ಮರದ ತುಂಬ ಹಣ್ಣು

ಪಟ ಪಟ ಹಾರುವ ಗಾಳಿಪಟ

_____

_____

_____




7. ಆಲಿಸಿ ಉತ್ತರ ಹೇಳಿರಿ.

ಆಟ

ಮಕ್ಕಳನ್ನು ಮೂರು ಗುಂಪುಗಳಾಗಿ ವಿಂಗಡಿಸಿಕೊಳ್ಳಬೇಕು. ಒಂದೊಂದು ಗುಂಪಿಗೂ ಕ್ರಮವಾಗಿ ಪ್ರಾಣಿ, ಪಕ್ಷಿ ಮತ್ತು ಸಸ್ಯಗಳು ಎಂಬ ಹೆಸರನ್ನು ಸೂಚಿಸಬೇಕು. ಶಿಕ್ಷಕರು 'ಪ್ರಾಣಿ ಪ್ರಾಣಿ ನಡೆಯುವ ಪ್ರಾಣಿ' ಎಂದು ಹೇಳಿದಾಗ ಪ್ರಾಣಿ ಎಂಬ ಹೆಸರಿನ ಗುಂಪಿನವರು ಪ್ರಾಣಿಗಳ ಹೆಸರನ್ನು ಹೇಳಬೇಕು. ಶಿಕ್ಷಕರು 'ಪಕ್ಷಿ ಪಕ್ಷಿ ಹಾರುವ ಪಕ್ಷಿ' ಎಂದು ಹೇಳಿದಾಗ ಪಕ್ಷಿ ಗುಂಪಿನವರು ಪಕ್ಷಿಗಳ ಹೆಸರನ್ನು ಹೇಳಬೇಕು. ಶಿಕ್ಷಕರು 'ಸಸ್ಯ ಸಸ್ಯ ಆಹಾರ ಕೊಡುವ ಸಸ್ಯ' ಎಂದು ಹೇಳಿದಾಗ ಸಸ್ಯ ಗುಂಪಿನವರು ಸಸ್ಯಗಳ ಹೆಸರನ್ನು ಹೇಳಬೇಕು. ಹೀಗೆ ಆಟವನ್ನು ಮುಂದುವರೆಸಬೇಕು ಯಾವ ಗುಂಪು ಅಧಿಕ ಸಂಖ್ಯೆಯಲ್ಲಿ ಹೆಸರನ್ನು ಹೇಳುವರೊ ಆ ಗುಂಪು ವಿಜಯಶಾಲಿಯಾಗುತ್ತದೆ. ವಿಜಯಶಾಲಿಯಾದವರನ್ನು ಅಭಿನಂದಿಸಬೇಕು.

ಈ ಆಟವನ್ನು ಹೇಗೆ ಆಡಬೇಕು? ಎಂದು ನಿಮ್ಮ ಮಾತೃಭಾಷೆಯಲ್ಲಿ ಹೇಳಿ.

8. ಯೋಚಿಸಿ ಉತ್ತರಿಸಿ.





ಎರಡೂ ಚಿತ್ರಗಳಿಗೆ ಸೂಕ್ತವಾದ ವಾಕ್ಯ ಯಾವುದು?

ಅ. ಗಲಾಟೆ ಮಾಡುವೆನು. ☐

ಅ. ನಿಶಬ್ದತೆಯನ್ನು ಪಾಲಿಸಬೇಕು. ☐

ಇ. ಮಕ್ಕಳೊಂದಿಗೆ ಆಟವಾಡುವೆನು. ☐

9. ಓದಿ ಉತ್ತರ ಬರೆಯಿರಿ.

ಗಿಡ ಮರ ಬೆಳೆಸೋಣ
ಹಸಿರನು ಉಳಿಸೋಣ
ಗಾಳಿ ನೀರು ಪಡೆಯೋಣ
ಕಾಡನು ಬೆಳೆಸೋಣ
ಹಕ್ಕಿ ಪಕ್ಷಿಗಳ ವಾಸಸ್ಥಾನ
ಪುಟ್ಟ ಪ್ರಾಣಿಗಳ ನೆರಳಿನ ತಾಣ
ಹಣ್ಣು ಹಂಪಲು ಆಹಾರ
ಹಸಿರೇ ಮಳೆಯ ಆಧಾರ



1. **ಯಾವುದನ್ನು ಬೆಳೆಸೋಣ?**
2. **ಮಳೆಯ ಆಧಾರ ಯಾವುದು?**
3. **ಯಾರಿಗೆ ನೆರಳಿನ ತಾಣವಾಗಿದೆ?**

10. ಮಾದರಿಯಂತೆ ಬರೆಯಿರಿ.



ಶಾಲಿನಿ ಅನುಸರಿಸುವ ರಸ್ತೆಗೆ ಸಂಬಂಧಿಸಿದ ಸೂಚನೆಗಳು / ನಿಯಮಗಳು

- ಜೀಬ್ರಾ ಕ್ರಾಸಿನಲ್ಲಿ ರಸ್ತೆ ದಾಟಬೇಕು.
- ಶಿರಸ್ತ್ರಾಣ ಧರಿಸಬೇಕು.
- ಕೆಂಪು ದೀಪ ಬಂದಾಗ ನಿಲ್ಲಬೇಕು.
- ರಸ್ತೆಯ ಎಡ ಭಾಗದಲ್ಲಿ ನಡೆಯಬೇಕು.

ಪರಿಸರವನ್ನು ಸಂರಕ್ಷಿಸಲು ನಾನು ಅನುಸರಿಸುವ ವಿಧಾನಗಳು...

11. ಹೇಳಿ ಅಭ್ಯಾಸ ಮಾಡು.

- ಸಂಪಂಗಪ್ಪನ ಮಗ ಮರಿ ಸಂಪಂಗಪ್ಪ
  ಕೆಂಪು ಕುಂಕುಮ ಕಪ್ಪು ಕುಂಕುಮ
- ರೆಡ್ ಲಾರಿ ಬ್ಲೂ ಲಾರಿ
  ರೈಲು ಲಾರಿ ಲಾರಿ ರೈಲು
- ತರೀಕೆರೆ ಏರಿ ಮೇಲೆ ಮೂರು ಕರಿ ಕುರಿ ಮರಿ
  ಮೇಯುತಿತ್ತು

ಪದೇ ಪದೇ ಉಚ್ಚರಿಸಿ ಅಭ್ಯಾಸ ಮಾಡಬೇಕು.

12. ಸರಿಯಾಗಿರುವುದಕ್ಕೆ ✓ ಗುರುತು ಹಾಕಿ ಕಾರಣ ಹೇಳಿ.

1. ಕಾಡು...

ಪ್ರಾಣಿಗಳನ್ನು ಬೇಟೆಯಾಡುವೆನು. ☐
ಮರಗಳನ್ನು ಕಡಿಯಬಾರದು. ☐
ಕಾಡಿನಿಂದ ನಾಡಿನ ವಿನಾಶ. ☐



2. ಆಸ್ಪತ್ರೆ...

ಆಸ್ಪತ್ರೆಯಲ್ಲಿ ಗಲಾಟೆ ಮಾಡುವೆನು. ☐
ಆಸ್ಪತ್ರೆಯಲ್ಲಿ ನಿಶಬ್ಧವಾಗಿರುವೆನು. ☐
ರೋಗಿಗಳಿಗೆ ತೊಂದರೆ ಕೊಡುವೆನು. ☐



3. ನ್ಯಾಯಬೆಲೆ ಅಂಗಡಿ...

ಸರದಿಯಲ್ಲಿ ಸಾಲಾಗಿ ನಿಲ್ಲುವೆನು. ☐
ಜನರೊಂದಿಗೆ ಜಗಳ ಮಾಡುವೆನು. ☐
ಸಾಲಾಗಿ ನಿಲ್ಲುವುದಿಲ್ಲ. ☐



4. ಜಾತ್ರೆ...

ಜಾತ್ರೆಯಲ್ಲಿ ತಿಂಡಿ ತಿನಿಸುಗಳನ್ನು ತಿನ್ನಬಾರದು. ☐
ಜಾತ್ರೆಗೆ ಹೋಗಿ ಗಲಾಟೆ ಮಾಡುವೆನು. ☐
ಜಾತ್ರೆಯನ್ನು ಬಿಟ್ಟು ದೂರ ಹೋಗುವೆನು. ☐



ದೈನಂದಿನ ಜೀವನದ ಸಾಮರ್ಥ್ಯಗಳನ್ನು ಪಡೆಯುವುದಕ್ಕೆ ತಕ್ಕಂತೆ ಚರ್ಚಿಸಬೇಕು.


ಕಲಿಕಾ ಪಯಣ

ಕಾರ್ಯ ಯೋಜನೆ ಘೋಷಣೆಗಳನ್ನು ರಚಿಸೋಣ.

ಕೊಟ್ಟಿರುವ ಸೂಚನೆಗಳನ್ನು ಬಳಸಿ ನಮ್ಮ ಸಮಾಜಕ್ಕೆ ಅಗತ್ಯವಾದ ಘೋಷಣೆಗಳನ್ನು ಬರೆಯಿರಿ. ಅದನ್ನು ಸೂಕ್ತವಾದ ಸ್ಥಳದಲ್ಲಿ ಪ್ರದರ್ಶಿಸಬೇಕು.

ಹಿಂತಿರುಗಿ ನೋಡೋಣ

ಚಿತ್ರ ನೋಡಿ ಗೆಳೆಯನ ಹತ್ತಿರ ಕಥೆ ಹೇಳಿರಿ.





ಆಟವಾಡುವ _____ ಆಕಾಶದಲ್ಲಿ _____


ಕೊಳದಲ್ಲಿ _____ ಮರದಲ್ಲಿ _____

ಗಿಡದಲ್ಲಿ _____ ನರ್ತಿಸುವ _____

ದಿನಸಿ ಸಾಮಗ್ರಿಯ ಹೆಸರನ್ನು ಕಂಡುಹಿಡಿಯಿರಿ. ಇಷ್ಟವಾದ ದಿನಸಿ ಸಾಮಗ್ರಿಯನ್ನು ಬರೆಯಿರಿ.

ಬೆಲ್ಲ	ಬೆಣ್ಣೆ
ಎಣ್ಣೆ	
ಅರಸ	
ಹಕ್ಕಿ	
ಕಡಲು	
ಅಲೆ	





ನನಗೆ ಇಷ್ಟವಾದ ದಿನಸಿ ಸಾಮಗ್ರಿಗಳು.

ಚಿತ್ರವನ್ನು ಸೇರಿಸಿ ಓದಿರಿ, ಪ್ರಶ್ನೆಗಳಿಗೆ ಉತ್ತರಿಸಿ.

ಒಂದು ಊರಿನಲ್ಲಿ ಒಬ್ಬ  ಇದ್ದನು. ಅವನು ಒಂದು  ಯನ್ನು ಸಾಕುತ್ತಿದ್ದನು. ಆ ಕುದುರೆಯನ್ನು ಹತ್ತಿಕೊಂಡು  ಗೆ ಹೋದನು. ಅಲ್ಲಿ ಜಿಗಿಯುವ  ಗಳನ್ನು ಕಂಡನು. ಅದನ್ನು ಬೇಟೆಯಾಡಲು ಹಿಂಬಾಲಿಸಿಕೊಂಡು ಹೋದನು.

1. ಸರಿಯಾದ ಉತ್ತರಕ್ಕೆ ✓ ಹಾಕಿರಿ.



ರಾಜನು ಕಾಡಿಗೆ ಹೋದನು. ☐

ರಾಜನು ಕಾಡಿಗೆ ಹೋಗಲಿಲ್ಲ. ☐

2. ವಿರುದ್ಧ ಪದ ಬರೆಯಿರಿ.

ಅಳು	ಅಂದ	

ನಾನು ಓದುವೆನು; ಬಣ್ಣ ಹಚ್ಚುವೆನು





ಚಿ ಡಿ ವಿ ಜಿ ನಿ ಘಿ


ಪಿ ಟಿ ರಿ ಗಿ ಸಿ ಮಿ

ಕಿ ತಿ ಳಿ ತಿ ಬಿ ದಿ



ದಿನ	ತಿರುವು	ನಿಧಾನ	ಮನೆ
ಲಿಪಿ	ವಿದ್ಯಾರ್ಥಿ	ಪಿಟೀಲು	ಸಿಂಹ
ಚಿಗುರು	ಗಿಡ	ಮಿಠಾಯಿ	ಅಳಿಲು
ಕಿಟಕಿ	ರಿಯಾಯಿತಿ	ಜಿರಳೆ	ಕುಡಿ

ಅಳಿಲು
ಸುಂದರವಾದ ಅಳಿಲು
ಆಲದ ಮರದಲ್ಲಿ ಸುಂದರವಾದ ಅಳಿಲು



ನಕ್ಷತ್ರ
ಮಿನುಗುವ ನಕ್ಷತ್ರ
ಆಕಾಶದಲ್ಲಿ ಮಿನುಗುವ ನಕ್ಷತ್ರ



ಗುಡುಗಿದ ಗುಡುಗು.

ಮಿಂಚಿದ ಮಿಂಚು.

ಸುವಾಸನೆಯುಳ್ಳ ಸುಗಂಧ ತೈಲ.

ಮಡಿಲಲ್ಲಿ ಮಗು.







ಕೋತಿ ಬಾಳೆಹಣ್ಣು ತಿಂದಿತು.

ಪ್ರಣತಿ ತಿಂಡಿ ತಿನಿಸು ತಿಂದಳು.


ಸಿಡಿಲು ಬಡಿಯಿತು.

ಮಂಜಿನ ಹನಿಗಳು ಸುಂದರವಾಗಿವೆ.









ನಾನು ಓದುವೆನು; ಬಣ್ಣ ಹಚ್ಚುವೆನು






ಚೀ ರೀ ದೀ ಗೀ ಘೀ ಪೀ

ವೀ ನೀ ಬೀ ಟೀ ಟೀ ಳೀ

ಸೀ ಟೀ ಮೀ ಲೀ ಜೀ ತೀ



ಜೀವನ	ಮೀನು	ವೀರ	ನೀರು
ಚೀತ್ಕಾರ	ಕೀರ್ತಿ	ಪೀಪಿ	ರೀತಿ
ತೀರ	ದೀನ	ಭೀತಿ	ಎಳನೀರು
ಘೀಳಿಡು	ಕಿರೀಟ	ಸೀತಾಫಲ	ಧೀರ



ಬೀಸಣಿಗೆ

ಬಿದಿರಿನ ಬೀಸಣಗೆ

ಉದ್ದವಾದ ಬಿದಿರಿನ ಬೀಸಣಿಗೆ

ವೀಣೆ

ಚಂದದ ವೀಣೆ

ಸ್ವರ ನುಡಿಸುವ ಚಂದದ ವೀಣೆ

ನೀರಿನಲ್ಲಿ ನೀರಾನೆ.

ಕಿಟಕಿಯಲ್ಲಿ ಕೀಟ.

ಬೀಸಿದ ಬಿರುಗಾಳಿ.

ನೀಲಾಳ ನೀತಿ ಕಥೆ.

ಮೀನಾ ಮೀನು ತಿಂದಳು.

ರೀತು ದೀಪ ಹಚ್ಚಿದಳು.

ಕೀರ್ತನ ಕೀರ್ತನೆಯನ್ನು ಹಾಡಿದಳು.

ಸೀತೆ ಸೀತಾಫಲ ತಿಂದಳು.









ನನ್ನಿಂದ ಸಾಧ್ಯ!



ನಾನು ನನ್ನ ಗೆಳೆಯರೊಂದಿಗೆ ಆಟವಾಡುವೆನು.

ಶಾಲೆಗೆ ಹೋಗುವೆನು.

ನಾನು ಪುಸ್ತಕವನ್ನು ಓದುತ್ತೇನೆ.

ಕೋಳಿ ಕೂಗುವುದು.

ಕಥೆ ಎಂದರೆ ಮಕ್ಕಳಿಗೆ ಅಚ್ಚುಮೆಚ್ಚು.

ಸೂರ್ಯನು ನಮಗೆ ಬೆಳಕನ್ನು ಕೊಡುವನು.

ನವಿಲು ನೃತ್ಯ ಮಾಡುತ್ತದೆ.

ಪಕ್ಷಿಗಳು ಹಾರಿ ಹೋದವು.

ಮೀನುಗಳು ಈಜುತ್ತವೆ.

ಸೂಚನೆಗಳನ್ನು ಓದುವೆನು.

ರಸ್ತೆ ನಿಯಮಗಳನ್ನು ಪಾಲಿಸುವೆನು.

ಅಜ್ಜಿ ಕಥೆ ಹೇಳುತ್ತಾರೆ.

ಗಾಳಿ ವೇಗವಾಗಿ ಬೀಸುತ್ತಿದೆ.

ಬಣ್ಣದ ಚಿಟ್ಟೆ ಸುಂದರವಾಗಿದೆ.

ಮಾತು ಬಲ್ಲವನಿಗೆ ಜಗಳವಿಲ್ಲ.

ಗೀತಾ ಹಾಡನ್ನು ಹಾಡುತ್ತಾಳೆ.

ಗದ್ದೆ ಹಚ್ಚಹಸಿರಾಗಿದೆ.

ಅಮ್ಮನಿಗೆ ಸಹಾಯ ಮಾಡುತ್ತೇನೆ.

ಮಲ್ಲಿಗೆ ಹೂವು ಸುವಾಸನೆಯಿಂದ ಕೂಡಿದೆ.

ಮಲ್ಲಿಗೆ ಹೂವು ಸುವಾಸನೆಯಿಂದ ಕೂಡಿದೆ.


ಆಕಾಶದಲ್ಲಿ ಚಂದಿರ.



ನಿರಂತರವಾಗಿ ಎಷ್ಟು ವಾಕ್ಯಗಳನ್ನು ಓದಲು ಸಾಧ್ಯ?

ಎಂಬುದನ್ನು ಸ್ನೇಹಿತರೊಡನೆ ಸ್ಪರ್ಧೆ ನಡೆಸಿ ಓದಬಹುದು.

ಮೊದಲ ಅವಧಿಯ ಕಲಿಕೆಯ ಪಯಣದಲ್ಲಿ...



Standard 3 - Kannada Reader - Term - I

Textbook Development Team

Subject Expert

Prof. Tamil Selvi. Prof & Head,
Department of Kannada,
University of Madras,
Chennai

Co-ordinator

Dr. T. Jayagandhi,
Senior Lecturer,
SCERT, Chennai

Reviewer

K.N. Adishesha, SGT,
PUPS, Sothanapuram,
Talavadi, Erode

Authors

N.Subramanya, SGT,
PUPS, Mallayanapuram,
Talavadi, Erode

S.Rudrappa, SGT,
PUPS, Malguthipuram,
Talavadi, Erode

P. Basavanna, SGT,
PUMS, Doddagajanur,
Talavadi, Erode

P.M. Subramanya, SGT,
PUPS, Kamayanapuram,
Talavadi, Erode

G. Mamatha, SGT,
PUMS, Talavadi,
Talavadi, Erode

S. Mary Flora, SGT,
PUMS, Mettalavady,
Talavadi, Erode

Art and Design Team

M. Amalraj,
Layout Co-ordinator,
B.T. Asst., SCERT, Chennai.

R. Yuvaraj, Designer

R. Adarsh, Designer

Illustration

S. Rameshkumar, Artist

Wrapper Design

Kathir Arumugam

This book has been printed on 80 G.S.M.
Elegant Maplitho paper.
Printed by offset at: